ಕರ್ನಾಟಕ ವಿಧಾನ ಸಭೆ

ಸೋಮವಾರ 13ನೇ ಜುಲೈ 1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

ಅಭಿನಂದನಾ ನಿರ್ಣಯ

ಭಾರತೀಯ ಬಾಹ್ಯಾಕಾಶ ಸಂಸ್ಥೆಯ ವಿಜ್ಞಾನಿಗಳು
ಇನ್‌ಸಾಟ್–2ಎ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ್ದರ ಬಗ್ಗೆ

ಅಧ್ಯಕ್ಷರು : ಮಾನವತೆಗೆ ಮತ್ತು ಶಾಂತಿ ಕಾರ್ಯಗಳಿಗೆ ಬಾಹ್ಯಾಕಾಶ ಸಂಪತ್ತನ್ನು ಬಳಸಿಕೊಳ್ಳುವ ಮಹತ್ ಕಾರ್ಯದಲ್ಲಿ ಅಭೂತಪೂರ್ವ ಸಾಧನೆ ನಡೆಸಿರುವ ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳನ್ನು ಈ ಸದನ ತುಂಬು ಹೃದಯದಿಂದ ಅಭಿನಂದಿಸುತ್ತದೆ. ಬಹುವಿಧೋದ್ದೇಶ ಹಾಗೂ ಬಹುಪಯೋಗಿ ಉಪಗ್ರಹ ಸರಣಿಯಲ್ಲಿ ಎರಡನೆಯ ತಲೆಮಾರಿನ ಉಪಗ್ರಹವಾದ ಇನ್‌ಸಾಟ್–2ಎ ಉಪಗ್ರಹವನ್ನು ರಚಿಸಿ ಉಡಾಯಿಸುವಲ್ಲಿ ಯಶಸ್ವಿಯಾಗಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಸಿಬ್ಬಂದಿಗೆ ಈ ದೇಶದ ಜನತೆ ಕೃತಜ್ಞರು. ಅಭಿವೃದ್ಧಿಶೀಲ ರಾಷ್ಟ್ರಗಳ ವೈಜ್ಞಾನಿಕ ಸ್ವಪರಿಪೂರ್ಣತೆಯಲ್ಲಿ ಇದೊಂದು ಬೃಹತ್ ಹೆಜ್ಜೆ. ನಮ್ಮಲ್ಲಿರುವ ಸಾಧನ ಸಲಕರಣೆಗಳನ್ನು ಬಳಸಿ ನಮ್ಮ ವಿಜ್ಞಾನಿಗಳು ರಚಿಸಿದ ಉಪಗ್ರಹ. ಉಳಿದೆಲ್ಲಾ ಉಪಮಾನಗಳಿಗೆ ಮೀರಿ ಬೆಂಗಳೂರು ವಿಜ್ಞಾನ ನಗರವಾಗಿ ಬೆಳೆದಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ ತವರು ಬೆಂಗಳೂರು. ಹೀಗಾಗಿ ಭಾರತೀಯ ಬಾಹ್ಯಾಕಾಶ ಸಾಧನೆಯ ಬಗೆಗೆ ನಮಗೆ ವಿಶೇಷವಾದ ಹೆಮ್ಮೆ. ಇನ್‌ಸಾಟ್–2ಎ ಉಪಗ್ರಹದ ಕಾರ್ಯ ಯಶಸ್ವಿಯಾಗಿ ಭಾರತೀಯ ಬಾಹ್ಯಾಕಾಶ, ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳು ಶಾಂತಿ ಕಾರ್ಯಗಳಿಗೆ ವಿಜ್ಞಾನವನ್ನು ಅಳವಡಿಸುವಲ್ಲಿ ಇನ್ನೂ ಹೆಚ್ಚು ಯಶಸ್ಸು ಸಾಧಿಸಲಿ ಎಂದು ಈ ಸದನ ಹಾರೈಸುತ್ತದೆ.

(ಸದಸ್ಯರೆಲ್ಲರೂ ಸಂತಸ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು)

ಈ ಸದನದ ನಿರ್ಣಯವನ್ನು ಇಸ್ರೋ ಅಧ್ಯಕ್ಷರಿಗೆ ಕಳುಹಿಸಿಕೊಡಲಾಗುವುದು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳ ನೇಮಕಾತಿಯನ್ನು ರದ್ದುಪಡಿಸಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆ ಮೂಲಕ ಅತ್ಯಂತ ಪ್ರಮುಖವಾದಂಥ ಸಂಗತಿಯನ್ನು ತಮಗೆ ಕಳುಹಿಸಿದ್ದೇನೆ. ಅದೇನೆಂದರೆ, ಕೆ.ಪಿ.ಎಸ್.ಸಿ. ಯಿಂದ ಐನು ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸಂದರ್ಶನ ನಡೆಸಿದ್ದಾರೆ, ಈ ಬಗ್ಗೆ ಪತ್ರಿಕಾ ಹೇಳಿಕೆ ಕೊಟ್ಟು ಈ ಸರ್ಕಾರ ಏಕಾಏಕಿಯಾಗಿ ಅದನ್ನು ರದ್ದುಮಾಡಿ ಅವರ ಒಂದು ಹಕ್ಕನ್ನು ಇವರೇ ಪಡೆದುಕೊಳ್ಳತಕ್ಕಂಥ ಒಂದು ಪ್ರಯತ್ನ ಇವತ್ತು ಈ ಸರ್ಕಾರ ಮಾಡಿದೆ. ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 10–7–1992ರಂದು ಈ ಮಂತ್ರಿಮಂಡಲದ ಸಚಿವ ಸಂಪುಟದ ಸಭೆ ಈ ಒಂದು ನಿರ್ಧಾರ ತೆಗೆದುಕೊಂಡಿರುವುದನ್ನು ಸಂಬಂಧಪಟ್ಟ ವಾರ್ತಾ

ಸಚಿವರಾದ ಶ್ರೀ ಶಿವಮೂರ್ತಿಯವರು ಪತ್ರಿಕೆಗಳಿಗೆ ತಿಳಿಸಿರುವುದು 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸ್ವಾಮಿ, ಕೆ.ಪಿ.ಎಸ್.ಸಿ.ಯ ಮೂಲಕ ಪ್ರೌಢಶಾಲಾ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಅನೇಕ ಭ್ರಷ್ಟಾಚಾರದ ಆರೋಪಗಳು ಇರುವುದರಿಂದ ಈ ಒಂದು ಆಯ್ಕೆ ಮಾಡತಕ್ಕಂಥ ಅಧಿಕಾರವನ್ನು ಅಂದರೆ, ಕೆಪಿ.ಎಸ್.ಸಿ.ಯಿಂದ ವಾಪಸ್ಸು ಪಡೆದು ಅದನ್ನು ಸಂಬಂಧಪಟ್ಟ ಶಿಕ್ಷಣ ಇಲಾಖೆಗೆ ವಹಿಸಿಕೊಟ್ಟಿದ್ದೇವೆ ಎನ್ನತಕ್ಕಂಥಾದ್ದು ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು : ಭ್ರಷ್ಟಾಚಾರ ಇದೆ ಎಂದು ಯಾರು ಹೇಳಿದರು ?

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮಂತ್ರಿಮಂಡಲದವ ಲೋಕಸೇವಾ ಆಯೋಗದವರು ಭ್ರಷ್ಟಾಚಾರ ಮಾಡುತ್ತಿದ್ದಾರೆ ಅಂತ ಹೇಳಿದ್ದಾರೆ. ಆದರೆ, ಯಾರು ಮಾಡಿದ್ದಾರೆ ಎನ್ನುವುದನ್ನು ಚರ್ಚೆಗೆ ತಾವು ಅನುಮತಿ ಕೊಟ್ಟಾಗ ನಾನು ವಿವರಗಳನ್ನು ತಮಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಅತ್ಯಂತ ಪ್ರಮುಖವಾದ ಸಂಗತಿ ಏನೆಂದರೆ, ಇವತ್ತು ಯಾವ ಸರ್ಕಾರ ಈ ಲೋಕಸೇವಾ ಆಯೋಗದ ವ್ಯವಸ್ಥೆ ಬಗ್ಗೆ ಗೌರವದಿಂದ ಮಾತನಾಡಬೇಕಾಗಿತ್ತೋ, ಜನರಲ್ಲಿ ವಿಶ್ವಾಸ ಮೂಡಿಸಬೇಕಾಗಿತ್ತೋ, ಅಥವಾ ಇಲ್ಲಿ ಏನಾದರೂ ಲೋಪ–ದೋಷಗಳು ಇದ್ದರೆ ಕಿವಿಮಾತು ಆಡಿ ಅದನ್ನು ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿತ್ತೋ ಆ ಒಂದು ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸರ್ಕಾರದವರೇ ಈ ಒಂದು ಸಂದರ್ಶನ ನಡೆಯುತ್ತಿರುವ ಸಂದರ್ಭದಲ್ಲಿ ಈ ರಾಜ್ಯದ ನಿರುದ್ಯೋಗಿ ಯುವಕರ ಜೀವನದ ಜೊತೆಗೆ ಚೆಲ್ಲಾಟ ಮಾಡತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಬಹಳ ಪ್ರಾಮುಖ್ಯವಾದ ಸಂಗತಿ ಏನೆಂದರೆ, ಇವತ್ತು ಈ ಲೋಕಸೇವಾ ಆಯೋಗ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ನೇಮಕವಾದ ನೇಮಕದ ಒಂದು ಹೊಣೆಯನ್ನು ಹೊತ್ತುಕೊಂಡಿದೆ. ಇಲ್ಲಿ ಸುಮಾರು 2900 ಹುದ್ದೆಗಳು ಖಾಲಿ ಇವೆ. ಈಗಾಗಲೇ ಸಂದರ್ಶನ ಪ್ರಾರಂಭವಾಗಿದೆ. ಅದರ ಅಧ್ಯಕ್ಷರೇ ಹೇಳುವ ಪ್ರಕಾರ ಈಗಾಗಲೇ ಒಂದು ಸಾವಿರ ಅಭ್ಯರ್ಥಿಗಳ ಸಂದರ್ಶನ ಮುಗಿದಿದೆ. ಈ ಹಂತದಲ್ಲಿ ಮಂತ್ರಿಮಂಡಲ ಇವತ್ತು ಈ ಒಂದು ತೀರ್ಮಾನವನ್ನು ತೆಗೆದುಕೊಂಡು ಈ ಒಂದು ಆಯ್ಕೆ ಮಾಡತಕ್ಕಂಥ ಅಧಿಕಾರವನ್ನು ಸರ್ಕಾರವೇ ಪಡೆಯತಕ್ಕಂಥ ಒಂದು ಪ್ರಯತ್ನ ಮಾಡುತ್ತಿದೆ. ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ತಜ್ಞರಾದ ಅಡ್ವೋಕೇಟ್ ಇದ್ದಾರೆ; ಅವರು ಹೇಳಬಹುದು. ಆದರೆ, ಇವತ್ತು ನಾನು ಪ್ರಾರಂಭದಲ್ಲಿ ಒಂದು ಸಂಗತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಈ ರೀತಿಯಾಗಿ ಕೆ.ಪಿ.ಎಸ್.ಸಿ. ಅವರು ಅವರದ್ದೇ ಆದಂಥ ಸಂವಿಧಾನ ಚೌಕಟ್ಟಿನಡಿಯಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ, ಈ ಸಂದರ್ಶನಗಳನ್ನು ರದ್ದುಮಾಡಿ ಅವರ ಅಧಿಕಾರವನ್ನು ಸರ್ಕಾರದವರೇ ಪಡೆಯುವುದಕ್ಕೆ ರಾಜ್ಯಾಂಗದಲ್ಲಿ 'ಏನಾದರೂ ಅವಕಾಶ ಇದೆಯೇ? ಈ ಕೆ.ಪಿ.ಎಸ್.ಸಿ. ಅಧ್ಯಕ್ಷರು ಮತ್ತು ಮೆಂಬರ್ಸ್ ನಮ್ಮ ಸಂವಿಧಾನದಡಿಯಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ, ಅದಕ್ಕೆ ಅಡ್ಡಿ ಮಾಡಿ ಈ ಒಂದು ಗೊಂದಲದ ವಾತಾವರಣವನ್ನು ಸೃಷ್ಟಿ ಮಾಡಲು ಪ್ರಯತ್ನ ಮಾಡುತ್ತಾ ಅವರ ಹಕ್ಕನ್ನು ಕಿತ್ತುಕೊಳ್ಳತಕ್ಕಂಥ ಒಂದು ಪ್ರಯತ್ನವನ್ನು ಈ ಸರ್ಕಾರ ಮಾಡಿದೆ. ಈವತ್ತು ಈ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಸರ್ಕಾರವೇ ನೇರವಾಗಿ ಕೆ.ಪಿ.ಎಸ್.ಸಿಯ ಈ ವ್ಯವಸ್ಥೆ ಏನಿದೆ, ಅಲ್ಲಿ ಅಧ್ಯಕ್ಷರು, ಸದಸ್ಯರು ಏನಿದ್ದಾರೆ, ಅವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಅದಕ್ಕಾಗಿ ಆ ಹಕ್ಕನ್ನು ವಾಪಸ್ಸು ಪಡೆಯಲಾಗಿದೆ ಎನ್ನುತಕ್ಕಂಥ ಮಾತನ್ನು ಅವರು ಪತ್ರಿಕೆಗಳಿಗೆ ಕೊಟ್ಟಿರುವ ಹೇಳಿಕೆ ಮೂಲಕ ಹೇಳಿದ್ದಾರೆ. ಈ ಸರ್ಕಾರವನ್ನು ನಾನು ತಮ್ಮ ಮೂಲಕ ಒತ್ತಾಯ ಮಾಡುವುದಕ್ಕೆ ಇಚ್ಛೆಪಡುವಂತಾದ್ದು ಏನೆಂದರೆ, ತಮಗೆ ಅಧಿಕೃತವಾಗಿ ಈ ಕೆ.ಪಿ.ಎಸ್.ಸಿ. ಮೂಲಕ ಆಯ್ಕೆಯಾಗುತ್ತಿರುವ ಈ ಸಂದರ್ಶನದ ಸಂದರ್ಭದಲ್ಲಿ ಯಾರಾದರೂ ದೂರನ್ನು ಸಲ್ಲಿಸಿದ್ದಾರೆಯೇ? ತಮ್ಮಲ್ಲಿ ಅದರ ದಾಖಲೆಗಳಿವೆಯೇ ಅಥವಾ ನಿಮಗೆ ಸಂವಿಧಾನದ ಪ್ರಕಾರ ಏನಾದರೂ ಹಕ್ಕು ಇದೆಯೇ? ಯಾವ ಆಧಾರದ ಮೇಲೆ ಇವತ್ತು ಸರ್ಕಾರ ಈ ಒಂದು ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ ಎನ್ನುವುದು ಮೊದಲನೆಯದು. ಎರಡನೆಯದು, ಈಗಾಗಲೇ 2900 ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳ ಪೈಕಿ ಒಂದು ಸಾವಿರ

ಅಭ್ಯರ್ಥಿಗಳ ಸಂದರ್ಶನ ಮುಗಿದು ಆಯ್ಕೆಯಾಗಿರತಕ್ಕಂಥ ಸಂದರ್ಭದಲ್ಲಿ ಆ ರೀತಿ ಆಯ್ಕೆಯಾದ ನಿರುದ್ಯೋಗಿ ವಿದ್ಯಾವಂತ ಯುವಕರ ಮುಂದಿನ ಭವಿಷ್ಯದ ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ? ಮೂರನೆಯದಾಗಿ, ಇವತ್ತು ಮೊದಲ ಬಾರಿಗೆ ಈ ಒಂದು ರೀತಿಯ ಆರೋಪವನ್ನು ಮಾಡಿದ ಮೇಲೆ ಅದರ ಅಧ್ಯಕ್ಷರಾದ ಶ್ರೀಮಾನ್ ದೊಡ್ಡೇಗೌಡರು ಪ್ರೌಢಶಾಲಾ ಮುಖ್ಯೋಪಾಧ್ಯಾಯರ ನೇಮಕದ ಹೊಣೆಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಹಿಂದಕ್ಕೆ ಪಡೆಯಲು ರಾಜ್ಯ ಸರ್ಕಾರದ ತೀರ್ಮಾನಿಸಿರುವುದನ್ನು ಸ್ವೇಚ್ಛಾಚಾರದ ಕ್ರಮವೆಂದು ಆರೋಪಿಸಿದ್ದಾರೆ. ಅವರು ಶುಕ್ರವಾರ ಪತ್ರಕರ್ತರ ಜೊತೆಯಲ್ಲಿ ಮಾತನಾಡುತ್ತಾ ಸರ್ಕಾರ ಇಂತಹ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವ ಮುನ್ನ ಆಯೋಗ ಹಾಗೂ ಅದರ ಸದ್ಯರನ್ನು ವಿಶ್ವಾಸನಕ್ಕೆ ತೆಗೆದುಕೊಳ್ಳಬೇಕಾಗಿತ್ತೆಂದು ಆಪಾದನೆ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಗಮನಿಸಬೇಕಾದಂಥ ಎರಡು ಪ್ರಮುಖವಾದಂತಹ ಸಂಗತಿಗಳು ಏನೆಂದರೆ, ಆ ಸದಸ್ಯರು ಭ್ರಷ್ಟಾಚಾರಗಳಲ್ಲಿ ತೊಡಗಿದ್ದಾರೆನ್ನುವ ಕಾರಣಕ್ಕಾಗಿ ಅವರಿಗಿದ್ದ ಅಧಿಕಾರವನ್ನು ವಾಪಸ್ಸು ಪಡೆದಿದ್ದೇವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅದಕ್ಕೆ ಲೋಕಸೇವಾ ಆಯೋಗದ ಅಧ್ಯಕ್ಷರು ನೇರವಾಗಿ ಇವತ್ತು ಈ ಸರ್ಕಾರ ಸ್ವೇಚ್ಛವಾದ ಕ್ರಮವನ್ನು ಅನುಸರಿಸುತ್ತಿದೆ. ಈ ಸರ್ಕಾರದವರು ಕಾನೂನು ಚೌಕಟ್ಟು ಮೀರಿ ವರ್ತನೆ ಮಾಡಿದ್ದಾರೆಂದು ಸರ್ಕಾರದ ಮೇಲೆ ಆರೋಪ ಮಾಡಿದ್ದಾರೆ.

ಇದರ ಮಧ್ಯೆ ಬಹಳ ಪ್ರಮುಖವಾದ ಸಂಗತಿ ಎಂದರೆ, ಸರ್ಕಾರ ಈ ರೀತಿ ನಿರಾಧಾರವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿರುವಂಥ ಒಂದು ಸಂವಿಧಾನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುವಂಥ ಒಂದು ಆಯೋಗಕ್ಕೆ ಈ ರೀತಿ ಅವರ ಜವಾಬ್ದಾರಿಯನ್ನು ವಾಪಸ್ಸ್ ಪಡೆಯುವಂಥ ಅಧಿಕಾರ ಇದೆಯೇ? ಸನ್ಮಾನ್ಯ ಅಧ್ಯಕ್ಷರೇ ನಾನು ವಿವರಕ್ಕೆ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಭಾರತದ ಸಂವಿಧಾನದ 317ನೇ ವಿಧಿಯ ಅಡಿಯಲ್ಲಿ ಇವತ್ತು ಈ ಒಂದು ಲೋಕಸೇವಾ ಆಯೋಗದ ಅಧ್ಯಕ್ಷರನ್ನು ನೇಮಕ ಮಾಡುವಂಥ ಒಂದು ಕೆಲಸವನ್ನು ರಾಷ್ಟ್ರಪತಿಗಳು ರಾಜ್ಯಪಾಲರ ಮೂಲಕ ಮಾಡಿಸುತ್ತಾರೆ. ಲೋಕಸೇವಾ ಆಯೋಗದ ಸದಸ್ಯನಾಗಿ ಈ ಪದವನ್ನು ಧಾರಣೆ ಮಾಡಿರುವ ವ್ಯಕ್ತಿ, ಇದು 317ರಲ್ಲಿ ಉಪಬಂಧಗಳನ್ನು ಒಳಪಟ್ಟ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಅಥವಾ ಇತರ ಯಾವೊನೇ ಸದಸ್ಯನನ್ನು ದುರ್ವರ್ತನೆ ಕಾರಣದ ಮೇಲೆ ರಾಷ್ಟ್ರಪತಿಯವರು ಆ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅದರ ಅಭಿಪ್ರಾಯ ಕೋರಿ ಕಳುಹಿಸಿದರು. ಸರ್ವೋಚ್ಚ ನ್ಯಾಯಾಲಯವು 145ನೇ ಅನುಚ್ಛೇದದ, ಮೇರೆಗೆ ಆ ಬಗ್ಗೆ ನೇಮಿಸಲಾದ ಪ್ರಕ್ರಿಯೆಗೆ ಅನುಸಾರವಾಗಿ ವಿಚಾರಣಾ ನಡೆಯಿಸಿ, ಸಂದರ್ಭಾನುಸಾರ, ಆ ಅಧ್ಯಕ್ಷನನ್ನು ಅಥವಾ ಅಂಥ ಇತರ ಯಾವನೇ ಸದಸ್ಯನನ್ನು ಅಂಥಾ ಯಾವುದೇ ಕಾರಣದ ಮೇಲೆ ತೆಗೆದುಹಾಕತಕ್ಕದೆಂದು ವರದಿ ಮಾಡಿದ ತರುವಾಯವೇ ರಾಷ್ಟ್ರಪತಿಯ ಆದೇಶದ ಮೂಲಕ, ಅವನನ್ನು ಪದದಿಂದ ತೆಗೆದುಹಾಕತಕ್ಕದ್ದು ಎಂದಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಲೋಕಸೇವಾ ಆಯೋಗದ ಒಂದು ಸಮಿತಿಯನ್ನು, ಅಧ್ಯಕ್ಷರನ್ನು, ಸದಸ್ಯರನ್ನು ರಾಷ್ಟ್ರಪತಿಗಳು, ರಾಜ್ಯಪಾಲರು ನೇಮಕ ಮಾಡುತ್ತಿದ್ದಾರೆ. ಇಂಥಾ ಒಂದು ಸಂದರ್ಭದಲ್ಲಿ ಆ ಸದಸ್ಯನನ್ನು ತೆಗೆದು ಹಾಕುವ ಸಂದರ್ಭ ಬಂದರೆ, ಅದು ರಾಷ್ಟ್ರಪತಿಗಳೇ ಕಾನೂನು ಚೌಕಟ್ಟಿನಲ್ಲಿ ಅವರ ಆದೇಶಾನುಸಾರ ಮಾಡಬೇಕಾಗುತ್ತದೆ. ಅಂದರೆ, ಈ ರೀತಿ ಸಂವಿಧಾನದ ಅಡಿಯಲ್ಲಿ ರಾಷ್ಟ್ರಪತಿಗಳು, ರಾಜ್ಯಪಾಲರು ನೇಮಕ ಮಾಡಿರುವಂಥ ಸಮಿತಿ, ಅವರು ರಿಕ್ರೂಟ್‌ಮೆಂಟ್ ಮಾಡುವಂಥ ಕೆಲಸ ಮಾಡತ್ತಿರುವಂಥ ಸಂದರ್ಭದಲ್ಲ ಅದನ್ನು ವಾಪಸ್ಸ್ ಪಡೆಯುವಂಥ ಹಕ್ಕು ಸಹಾ ರಾಜ್ಯಸರ್ಕಾರಕ್ಕೆ ಇಲ್ಲ. ಅದನ್ನು ಏನಾದರೂ ಮಾಡಬೇಕಾದರೂ ಅದು ರಾಷ್ಟ್ರಪತಿಗಳ ಮೂಲಕ, ರಾಜ್ಯಪಾಲರ ಮೂಲಕವೇ ಮಾಡಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್ ರಾಷ್ಟ್ರಪತಿಗಳಿಗೆ ಅವರನ್ನು ನೇಮಿಸುವ ಹಕ್ಕು ಇದ್ದರೆ, ಈಗ ಮಾನ್ಯ ಯಡಿಯೂರಪ್ಪನವರು ಹೇಳಿದ ಪ್ರಕಾರ ನೇಮಿಸಿದಂಥ ಅವರನ್ನು ತೆಗೆದುಹಾಕುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡಿಲ್ಲ. ಅಲ್ಲಿ ಏನು ಈ ಶಿಕ್ಷಕರನ್ನು ನೇಮಿಸಿಕೊಳ್ಳುವಾಗ ಅವ್ಯವಹಾರಗಳು ನಡೆದಿವೆ ಎನ್ನುವ ಆಧಾರದ ಮೇಲೆ ಸರ್ಕಾರ ಆ ಪಟ್ಟಿಯನ್ನು ಕ್ಯಾನ್ಸಲ್ ಮಾಡುವುದಕ್ಕೋ ಅಥವಾ ಈಗ

ಅದನ್ನು ವಾಪಸ್ ಪಡೆಯುವದಕ್ಕೋ ಅಥವಾ ಅದನ್ನು ಸ್ಥಗಿತಗೊಳಿಸುವುದಕ್ಕೋ ಪ್ರಯತ್ನ ಮಾಡಿದೆಯೇ ಹೊರತು ಇಲ್ಲಿ ಅವರು ಸಂವಿಧಾನ ಚೌಕಟ್ಟಿನಲ್ಲಿ ಓದಿ, ನೇಮಿಸಿದವರನ್ನು ತೆಗೆದುಹಾಕುವುದಕ್ಕೆ ಸರಕಾರ ಪ್ರಯತ್ನ ಮಾಡಿಲ್ಲ. ಆದ್ದರಿಂದ, ಆ ವಿಷಯ ಬಿಟ್ಟು ಈ ವಿಷಯ ಮಾತ್ರ ಮಾತನಾಡುವುದು ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಏನು ತರುವುದಕ್ಕೆ ಹೊರಟಿದ್ದೇನೆಂದರೆ ಒಂದು ಸಾರಿ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ಸಂವಿಧಾನದ ಒಂದು ಅಡಿಯಲ್ಲಿ......

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ನಾಯಕರು ಹೇಳುತ್ತಿದ್ದರು, ಕೆ.ಪಿ.ಎಸ್.ಸಿ.ನಲ್ಲಿ ಅವರು ಅಲ್ಲಿ ಸರಿಯಾಗಿ ವ್ಯವಹಾರ ನಡೆಯುತ್ತಿಲ್ಲವೆಂದು ಆಪಾದನೆ ಬಂದಿರುವ ಹಿನ್ನಲೆಯಲ್ಲಿ ಅದನ್ನು ಸ್ಥಗಿತಗೊಳಿಸಿದ್ದಾರೆ ಎಂದು. ಅದು ನಮ್ಮ ರೆಕಾರ್ಡ್‌ಗೆ ಹೋಯಿತು.

ಶ್ರೀ ಆರ್.ಎನ್. ನಾಯಕ್ : ನಾನು ಹಾಗೇ ಹೇಳಲಿಲ್ಲ ಮಾನ್ಯ ಯಡಿಯೂರಪ್ಪನವರು ಅದನ್ನು ಹೇಳುತ್ತಿದ್ದರು. ನಾನು ಈ ವಿಚಾರ ಬಿಟ್ಟು ಮಾತನಾಡಿ ಎಂದು ಹೇಳಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಆದರೂ ಸರ್ಕಾರದ ಮಂತ್ರಿಗಳಲ್ಲಿ ಯಾರನ್ನಾದರೂ ಕರೆಸಿ ಕೇಳತಕ್ಕಂಥಾದ್ದು ಸಾಧುವಾದುದೆಂದು ನನ್ನ ಸಲಹೆ. ಏತಕ್ಕೆಂದರೆ ಕೆ.ಪಿ.ಎಸ್.ಸಿ. ನಮ್ಮ ಚೌಕಟ್ಟಿನಲ್ಲಿ ಬರತಕ್ಕಂಥಾದ್ದಲ್ಲ. ಅದು ರಾಜ್ಯಾಂಗದಲ್ಲಿರತಕ್ಕಂಥ ಒಂದು ವ್ಯವಸ್ಥೆ. ಅವರು ಏನು ಸೆಲೆಕ್ಷನ್ ಮಾಡುತ್ತಾರೋ ಅದು ಸರಿ ಇಲ್ಲದೆಹೋದರೆ ಕ್ಯಾಬಿನೆಟ್ ಅದನ್ನು ನಿರಾಕರಿಸಬಹುದು. ನಿರಾಕರಿಸಿದ ಮೇಲೆ ಏಕೆ ನಿರಾಕರಿಸುತ್ತೇವೆಂದು ಈ ಸದನದ ಗಮನಕ್ಕೆ ಅವರು ತರಬೇಕಾಗುತ್ತದೆ. ಅದು ಕೂಡಾ ಇದರಲ್ಲಿರತಕ್ಕಂಥ ವಿಚಾರ. ಹಾಗಿರುವಾಗ ಈ ಸದನದಿಂದ ಅವರು ದೂರ ಇರಲಿಕ್ಕೆ ಸಾಧ್ಯವಿಲ್ಲ. ಒಂದು ಸೂಕ್ಷ್ಮವಾದ ಪ್ರಶ್ನೆ ಏನೆಂದರೆ ಇದೇನಾದರೂ ಇದ್ದರೆ, ಇರಬಹುದು. ಮನುಷ್ಯರು ಇರುವ ಪ್ರದೇಶದಲ್ಲಿ ಅದೆಲ್ಲಾ ಆಗುತ್ತದೆ. ಒಂದು ವೇಳೆ ಇದ್ದರೆ, ಕ್ಯಾಬಿನೆಟ್‌ಗೆ, ಅದರ ಆಧಾರದ ಮೇಲೆ, ಪತ್ರಿಕೆಗಳಲ್ಲಿ ಏನು ಬಂದಿದೆ ಅದರ ಆಧಾರದ ಮೇಲೆ ಅದನ್ನೇನಾದರೂ ನಿಲ್ಲಿಸಿದ್ದಾರೋ ಹೇಗೆ? ಅದನ್ನು ತಿಳಿದುಕೊಳ್ಳದೆ ಈ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಸ್ವಲ್ಪ ತಪ್ಪಾಗಬಹುದೆಂದು ನನ್ನ ವಿನಂತಿ. ಏತಕ್ಕೆಂದರೆ ಕೆ.ಪಿ.ಎಸ್.ಸಿ. ಪರವಾಗಿ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಇಲ್ಲಿ ಯಾರೂ ಇಲ್ಲ. ನಮಗೆ ಹಕ್ಕಿದೆ ಎಂದು ನಾವು ಅದರ ಪ್ರಸ್ತಾಪ ಮಾಡಿ ರೆಕಾರ್ಡಿನಲ್ಲಿ ಹೋಗುವ ಹಾಗೆ ಮಾಡಿದರೆ, ಮಾನ್ಯ ಸದಸ್ಯರು ತಮಗೆ ನಿಲುವಳಿ ಕಳುಹಿಸಿದ್ದರೆ, ಅದಕ್ಕೆ ಪೂರ್ವಭಾವಿಯಾಗಿ ತಾವು ಮಂತ್ರಿಗಳನ್ನು ಏಕೆ ಏನು ಎಂದು ಕೇಳಿ ತದನಂತರ ಇದರ ಪ್ರಸ್ತಾಪಕ್ಕೆ ಅವಕಾಶಕೊಡತಕ್ಕಂಥಾದ್ದು ಸೂಕ್ತವೆಂಬುದು ನನ್ನ ವಿನಂತಿ.

ಅಧ್ಯಕ್ಷರು : ಮಾನ್ಯ ಕಾನೂನು ಸಚಿವರೇ ತಮಗೆ ಈ ಅಜರ್ನ್‌ಮೆಂಟ್ ಮೋಷನ್ ವಿಚಾರಕ್ಕೆ ಸಂಬಂಧಪಟ್ಟಂತೆ ನೋಟೀಸ್ ಬಂದಿದೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ನನಗೆ ಆಧಾರ ಏನು ? ಇವತ್ತು ಒಂದು ಪಟ್ಟಿ ರದ್ದು ಮಾಡಿರುವುದರ ಬಗ್ಗೆ ನಮಗೆ ಸರ್ಕಾರಿ ಆಜ್ಞೆ ಸಿಕ್ಕಿಲ್ಲ. ಆದರೆ ಮಂತ್ರಿಮಂಡಲದ ಸಭೆಯ ನಿರ್ಧಾರದ ಬಗ್ಗೆ ಸಂಬಂಧಪಟ್ಟ ಸಚಿವರು ಏನು ಹೇಳಿದ್ದಾರೆ, ಅದು ಎಲ್ಲಾ ಪತ್ರಿಕೆಗಳಲ್ಲಿಯೂ ದಿನಾಂಕ : 10–7–92ರಂದು ಪ್ರಕಟ ಆಗಿದೆ ಕನ್ನಡ ಪ್ರಭದಲ್ಲಿ ಪ್ರಕಟ ಆಗಿದೆ. ಮಾನ್ಯ ರಂಗನಾಥ್ ಅವರೇ, ನಿಮಗೆ ಅನುಕೂಲ ಆಗುವ ಒಂದು ಸಂಗತಿಯನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ನಾವು ನೀವು ಸಭೆಯ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಮಾನ್ಯ ಮಂತ್ರಿಗಳನ್ನು ವಿಚಾರಿಸಿದರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದರ ಅಗತ್ಯ ಇಲ್ಲ. ಇದು ಈಗಾಗಲೇ ಇಡೀ ರಾಜ್ಯದ ಜನತೆಗೆ ಗೊತ್ತಿರುವ ಸಂಗತಿ. ಪತ್ರಿಕೆಯಲ್ಲಿ ಬಂದಿದೆ. ಅದರ ಚೇರ್ಮನ್ ಅವರು ಸರ್ಕಾರದ ಈ ಸ್ವೇಚ್ಛಾಚಾರದ ವರ್ತನೆ ಬಗ್ಗೆ ಪತ್ರಿಕೆಯಲ್ಲಿ ಬಹಿರಂಗವಾದ ಬಹಿರಂಗವಾದ ಹೇಳಿಕೆಯನ್ನು

ಕೊಡುವಂತಹ ಮಟ್ಟಕ್ಕೆ ಹೋದಮೇಲೆ ನಾವು ಜವಾಬ್ದಾರಿ ಇರುವಂತಹ ಸದಸ್ಯರು ಈ ಸದನದ ಕಾರ್ಯಕಲಾಪ ಮುಗಿಯುವಂತಹ ಈ ಸಂದರ್ಭದಲ್ಲಿ ಚರ್ಚೆ ಆಗದೇ ಇದ್ದರೆ ದೊಡ್ಡ ಅಪರಾಧ ಮಾಡಿದಂತಾಗುತ್ತದೆ ಎನ್ನುವುದಕ್ಕಾಗಿ ನಾನು ಇಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ವಾರ್ತಾ ಸಚಿವರಾದ ಮಾನ್ಯ ಶಿವಮೂರ್ತಿಯವರು ಈ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಏನು ಆಗಿದೆ ಎಂಬುದನ್ನು ಹೇಳಿದ್ದಾರೆ. ಅದೇನೆಂದರೆ, "ಸಾರ್ವಜನಿಕರಿಂದ ಭ್ರಷ್ಟಾಚಾರದ ಆರೋಪಗಳು ಕೇಳಿಬರುತ್ತಿರುವುದರಿಂದ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ನೇಮಕದ ಹೊಣೆಯನ್ನು ಕರ್ನಾಟಕ ಲೋಕ ಸೇವಾ ಆಯೋಗದಿಂದ ಹಿಂದಕ್ಕೆ ಪಡೆಯಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ'' ಸಚಿವ ಸಂಪುಟದ ಸಭೆಯ ನಂತರ ಈ ನಿರ್ಧಾರವನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ ವಾರ್ತಾ ಸಚಿವರಾದ ಶ್ರೀ ಕೆ ಶಿವಮೂರ್ತಿ ಅವರು – ಕರ್ನಾಟಕ ಲೋಕ ಸೇವಾ ಆಯೋಗದ ಆಯ್ಕೆಯ ಬಗ್ಗೆ ಶಾಸಕರು ಮತ್ತು ಸಂಸತ್ ಸದಸ್ಯರಿಗೆ ಸಮಾಧಾನ ಇರಲಿಲ್ಲ; ಈ ಹಿನ್ನೆಲೆಯಲ್ಲಿ ಆಯ್ಕೆಯ ಕಾರ್ಯವನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಲಾಗಿದ್ದು, ನೇಮಕದ ಪ್ರಕ್ರಿಯೆಯನ್ನು ನಿಲ್ಲಿಸುವಂತೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಈಗಾಗಲೇ ಸೂಚನೆ ನೀಡಲಾಗಿದೆ'' ಎಂದು ಹೇಳಿದ್ದಾರೆ. ಇಲ್ಲಿ ಪ್ರಮುಖವಾದ ವಿಷಯ ಏನು? ಈ ಸರ್ಕಾರಕ್ಕೆ ಈ ಲೋಕ ಸೇವಾ ಆಯೋಗದ ಕೆಲಸ ಕಾರ್ಯಗಳ ಮಧ್ಯೆ ಪ್ರವೇಶ ಮಾಡುವಂತಹ ಹಕ್ಕು ಇಲ್ಲ. ಅವರಿಗೆ ಜುರಿಡಿಕ್ಷನ್ ಇಲ್ಲ, ಹಾಗೂ ವಿತ್‌ಡ್ರಾ ಮಾಡಿಕೊಳ್ಳುವಂತಹ ಪವರ್ಸ್ ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ಇಲ್ಲಿ ಈ ಒಂದು ವ್ಯವಸ್ಥೆಗೆ ಅಪಮಾನ ಮಾಡುವಂತಹ ಕೆಲಸ ಆಗಿದೆ. ಸಂವಿಧಾನದ ಚೌಕಟ್ಟಿನ ಅಡಿಯಲ್ಲಿ ಕೆಲಸ ಮಾಡುತ್ತಾ ಇರುವಂತಹ ಈ ಒಂದು ವ್ಯವಸ್ಥೆ ಬಗ್ಗೆ ಈ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡಿದೆ, ಪ್ರವೇಶ ಮಾಡಿದೆ. ಇದು ಎಲ್ಲಿಗೆ, ಯಾವ ಹಂತ ತಲುಪಿದೆ? ನಾನು ಸಂಬಂಧಪಟ್ಟ ಕೆಲವು ಸದಸ್ಯರನ್ನು ಈ ವಿಚಾರದ ಬಗ್ಗೆ ಸಂಪರ್ಕ ಮಾಡುವಂತಹ ಪ್ರಯತ್ನ ಮಾಡಿದೆ. ಈ ರೀತಿ ಅಪಮಾನ ಮಾಡಿಕೊಂಡು ನಾವು ಚೇರ್ಮನ್, ಸದಸ್ಯರುಗಳು ಇಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದುಕೊಂಡು ರಾಜೀನಾಮೆ ಕೊಡುವುದಕ್ಕೆ ಯೋಚನೆ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಬಹುಶಃ ಸರ್ಕಾರದ ಉದ್ದೇಶ ಇದೇ ಇರಬಹುದು, ಸರ್ಕಾರ ಈ ಕುತಂತ್ರ ಮಾಡಿ ಈ ರೀತಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಾ ಇರುವಂತಹ ವ್ಯವಸ್ಥೆಗೆ ಅಪಮಾನ ಮಾಡಿದ್ದಾರೆ. ಅಪಮಾನ ಮಾಡಿ ಅವರನ್ನು ಕಿತ್ತೊಗೆಯುವಂತಹ ರಾಜಕೀಯದ ದೊಂಬರಾಟ ಮಾಡುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೇ ನಾನು ಯಾರಿಗೂ ಯೀಲ್ಡ್ ಆಗಿಲ್ಲ. ದಯಮಾಡಿ ಯಾರೂ ಸಹ ಮಧ್ಯೆ ಮಾತನಾಡದ ಹಾಗೆ ಮಾಡಿ. ನಾನು ಕುಳಿತ ಮೇಲೆ ಅವರು ಏನು ಹೇಳುತ್ತಾರೋ, ಅದಕ್ಕೆ ಉತ್ತರ ಕೊಡುವುದಕ್ಕೆ ನಾನು ಸಿದ್ಧ. ನಾನು ತಪ್ಪು ಹೇಳಿದರೆ ಅದನ್ನು ತಿದ್ದತಕ್ಕ ಅಧಿಕಾರ ತಮಗೆ ಇದೆ. ಆದ್ದರಿಂದ ಯಾರೂ ಮಧ್ಯದಲ್ಲಿ ಪ್ರವೇಶ ಮಾಡುವಂತಹ ಪ್ರಯತ್ನ ಮಾಡಬಾರದು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಇವತ್ತು ಇದರ ಪರಿಣಾಮ ಏನು ಹೋಯಿತು? ಇವತ್ತು ರಾಜ್ಯದಲ್ಲಿ ಸುಮಾರು 2900 ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು : ಪರಿಣಾಮಕ್ಕೆ ಹೋಗುವುದು ಬೇಡ. ನಮ್ಮದು ಸೀಮಿತವಾದ ವಿಚಾರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪರಿಣಾಮಕ್ಕೆ ಹೋಗುವುದಿಲ್ಲ. ಇಲ್ಲಿ ಏನು ಆಗಿದೆ? 'ಏಕೆ ಹೀಗೆ ಆಯಿತು?

ಅಧ್ಯಕ್ಷರು : ಏಕೆ ಆಯಿತು, ಎನ್ನುವುದಕ್ಕೂ ಹೋಗಬಾರದು, ಪರಿಣಾಮಕ್ಕೂ ಹೋಗಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಪರಿಣಾಮಕ್ಕೆ ಹೋಗುವುದಿಲ್ಲ. ವಸ್ತು ಸ್ಥಿತಿ ಬಗ್ಗೆ ಹೇಳುತ್ತೇನೆ. ನೀವು ಅವಕಾಶ ಮಾಡಿಕೊಟ್ಟರೆ ಮಾತ್ರ ವಿವರವಾಗಿ ಹೇಳುತ್ತೇನೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಕೆಲವರನ್ನು ಆಯ್ಕೆ ಮಾಡಿ ಎಂದು ಪಟ್ಟಿ ಕಳಿಸಿದರು. ಅವರು ಇವರ ಮಾತನ್ನು ಕೇಳಲಿಲ್ಲ ಎಂದು ಹೇಳಿ.

Mr. Speaker you are going into the details. You are jumping into the gulf.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಹಾಗಲ್ಲ ಅಧ್ಯಕ್ಷರೆ.

Mr. Speaker No. No. ಇಲ್ಲಿ ನಾವು ಸೀಮಿತವಾಗಿ ಮಾತನಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ರದ್ದು ಮಾಡಿದರೆ ಮುಂದಿನ ಪರಿಸ್ಥಿತಿ ಏನಾಗಬಹುದು.

ಅಧ್ಯಕ್ಷರು : ಅದನ್ನು ಆಮೇಲೆ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಸರ್ಕಾರ ನೇಮಕ ಮಾಡಿರುವಂತಹ ಎಲ್ಲಾ ಆಯೋಗಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿರಬೇಕಾದರೆ, ವಿಧಾನಸೌಧದ ಮೂರನೇ ಮಹಡಿಯಲ್ಲಿ ಭ್ರಷ್ಟಾಚಾರದ ಹಗರಣಗಳಲ್ಲಿ ಮಂತ್ರಿಗಳು ಉನ್ನತ ಅಧಿಕಾರಿಗಳೂ ತೊಡಗುತ್ತಾ ಇರಬೇಕಾದರೆ, ಬೇರೆಯವರ ಮೇಲೆ ಆರೋಪ ಮಾಡುವಂತಹ ನೈತಿಕ ಹಕ್ಕು.

(ಗೊಂದಲ)

ಮೂರು ಕೋಟಿ ರೂಪಾಯಿಗಳ ದುರ್ವ್ಯವಹಾರ ಮಾಡಿದೆ ಈ ಸರ್ಕಾರ.

ಶ್ರೀ ಬಿ.ಎಂ. ಇದಿನಬ್ಬ : ನನ್ನದೊಂದು ಕ್ರಿಯಾಲೋಪವಿದೆ.

ಅಧ್ಯಕ್ಷರು : ಮಾನ್ಯ ಇದಿನಬ್ಬನವರ ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಷ್ಟೆಲ್ಲಾ ವಿವರಣೆ ಕೊಡುತ್ತಾರೆ. ಇದರಲ್ಲಿ ಬಹಳ ಸೂಕ್ಷ್ಮವಾದ ಒಂದು ವಿಚಾರ ಉಂಟು. ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್ ಅವರು ಹೇಳಿದಂತೆ ಈ ವಿಷಯವನ್ನು ಮಂತ್ರಿಗಳ ಹತ್ತಿರ ಮಾತನಾಡಿದ ಮೇಲೆ, ವಿಷಯ ತಿಳಿದ ಮೇಲೆ ಈ ವಿಚಾರ ಚರ್ಚೆಗೆ ಬರಬೇಕೇ ಹೊರತಾಗಿ ಅದಕ್ಕೆ ಮೊದಲೇ ಯಾವುದನ್ನು ಹೇಳಿದರೂ ಅದಕ್ಕೆ ಅರ್ಥ ಬರುವುದಿಲ್ಲ. ಆದ್ದರಿಂದ ಮಾನ್ಯ ರಂಗನಾಥ್ ಅವರು ಹೇಳಿದಂತೆ ಆ ರೀತಿಯಲ್ಲಿ ಹೋದರೆ ಸರಿ ಆಗುತ್ತದೆ ಎಂದು ಕಾಣುತ್ತದೆ. ಎಲ್ಲವನ್ನೂ ಹೇಳುತ್ತಾ ಹೋದರೆ ಹೇಗೆ? ಪತ್ರಿಕೆಯಲ್ಲಿ ಬಂದಿರುವ ಎಲ್ಲವನ್ನೂ ಹೇಳುತ್ತಾ ಹೋದರೆ ಎಷ್ಟೋ ವಿಚಾರಗಳನ್ನು ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ಮಾನ್ಯ ವಾಟಾಳ್‌ರವರೇ, ಮಾನ್ಯ ನಂಜುಂಡಸ್ವಾಮಿ ಅವರು ಹೇಳಲಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ ಈಗ ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್ ಹಾಗೂ ಇದಿನಬ್ಬ ಅವರು ಏನು ಹೇಳುತ್ತಿದ್ದಾರೆ, ಆ ಬಗ್ಗೆ ನಾನು ಒಂದು ವಿಚಾರವನ್ನು ಸರ್ಕಾರದಿಂದ ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಸಚಿವ ಸಂಪುಟದ ತೀರ್ಮಾನ ಪತ್ರಿಕೆಯಲ್ಲಿ ಪ್ರಕಟವಾಯಿತಲ್ಲಾ, ಅದು ನಿಜವೇ ಅಥವಾ ಸುಳ್ಳೇ ಎಂದು ಮೊದಲು ಸರ್ಕಾರ ಹೇಳಿಬಿಟ್ಟರೆ ನಾವು ಚರ್ಚೆಯನ್ನು ಮುಂದುವರಿಸಬಹುದು ಅಥವಾ ಅದನ್ನು ನಿಲ್ಲಿಸಬಹುದು.

ಅಧ್ಯಕ್ಷರು : ಮಾನ್ಯ ಕಾನೂನು ಸಚಿವರು...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಮುಂದಕ್ಕೆ ಹೋಗುವ ಮೊದಲು ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು : ಸರಕಾರದವರು ಏನಾದರೂ ಇದನ್ನು ಕಾಂಟ್ರಡಿಕ್ಟ್ ಮಾಡಿದ್ದಾರೆಯೇ ?

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲ;

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಕಾಂಟ್ರಡಿಕ್ಟ್ ಮಾಡಿಲ್ಲವಾದುದರಿಂದ ಏನು ಈ ಒಂದು ಸಂವಿಧಾನದ ಒಳಗಡೆ ಸ್ವತಂತ್ರ ಸಂಸ್ಥೆ ಇದೆ, ಅದರ ಮೇಲೆ ಏನು ಡ್ಯಾಮೇಜ್ ಆಗಬೇಕು ಅದು ಆಗಿಹೋಗಿದೆ. ಆ ಕಾರಣಕ್ಕಾಗಿ ಇದು ಬಹಳ ಮುಖ್ಯವಾದಂಥ ಪ್ರಶ್ನೆಯಾಗಿರುವುದರಿಂದ, ಇದು ಮುಂದುವರಿಯಬಾರದು ಎಂಬ ಕಾರಣದಿಂದ ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಹಾಗೆಯೇ ಮಾನ್ಯ ಸದಸ್ಯರಾದ ನಾಯಕ್‌ರವರು ಏನೊಂದು ಪ್ರಶ್ನೆಯನ್ನು ಎತ್ತಿದರು, ಆ ಬಗ್ಗೆ ಹೇಳಲು ಮಾನ್ಯ ಕಾನೂನು ಸಚಿವರು ಕೂಡ ಇದ್ದಾರೆ....

Mr. Speaker : He is raising an important constitutional matter.

Do you have a copy of the constitution.

Prof. M.D. Nanjunda Swamy : I am holding the constitution of India in my hand.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಮಂತ್ರಿಗಳ ಜವಾಬ್ದಾರಿಯನ್ನು ಮಾನ್ಯ ಮುಖ್ಯಮಂತ್ರಿಯವರೇ ತೆಗೆದುಕೊಂಡಿದ್ದಾರೆ.....

(ಗೊಂದಲ)

ಅಧ್ಯಕ್ಷರು : ಕಾನೂನು ಸಚಿವರ ಅಡ್ವೈಸ್‌ನ್ನು ತೆಗೆದುಕೊಳ್ಳುವ ಸ್ವತಂತ್ರವೂ ನನಗೆ ಇಲ್ಲವೆಂದು ತಾವು ಹೇಳುತ್ತೀರಾ ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾಹಿತಿಗಳು ಅವರಿಗೆ ಸಿಗುವವರೆಗೆ ಕಾನೂನು ಸಚಿವರು ಕೂಡ ಹೇಳುವುದು ಕಷ್ಟವಾಗುತ್ತದೆ. ಈ ಬಗ್ಗೆ ನಾನು ತಮ್ಮ ಕೊಠಡಿಯಲ್ಲಿಯೂ ಕೂಡ ಚರ್ಚೆ ಮಾಡಿದ್ದೇನೆ. ದಯಮಾಡಿ ತಾವು ಈ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಪ್ರೊ: ನಂಜುಂಡಸ್ವಾಮಿಯವರು ತಮ್ಮ ಮಾತನ್ನು ಮುಗಿಸಿಲ್ಲ, ಅವರು ಮಾತನಾಡಲಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಕಾನೂನು ಸಚಿವರು ಈಗ ಸಂವಿಧಾನವನ್ನು ತರಿಸಿಕೊಂಡಿದ್ದಾರೆ ಎಂದು ನಾನು ಭಾವಿಸಿದ್ದೇನೆ.

Mr. Speaker : He is fully armed now.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ನಮಗೆ ಗೊತ್ತಿದೆ, ಸಂವಿಧಾನದಲ್ಲಿ ನಾವು ಕೆಲವು ಸಂಸ್ಥೆಗಳನ್ನು ರಚನೆ ಮಾಡಿದ್ದೇವೆ. ಅದರಲ್ಲಿಯೂ ವಿಶೇಷವಾಗಿ ಕೆಲವೇ ಸಂಸ್ಥೆಗಳಿಗೆ ಅವುಗಳ ಸ್ವಾತಂತ್ರ್ಯ ರಕ್ಷಣೆಗಾಗಿ ಕೂಡ - independence of the institutions, independence of the judiciary, independence of the Union Public Service Commission, independence of the State Public Service Commissions. ಇದನ್ನು ರಕ್ಷಣೆ ಮಾಡುವುದಕ್ಕೋಸ್ಕರವಾಗಿ ವಿಶೇಷವಾದಂತ ನಿಯಮಗಳನ್ನು ನಾವು ಸಂವಿಧಾನದ ಒಳಗಡೆ ಸೇರಿಸಿದ್ದೇನೆ. ಇದನ್ನು ಪ್ರಾರಂಭಿಕವಾಗಿ ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಮಾನ್ಯ ನಾಯಕ್‌ರವರು ಒಂದು ಪ್ರಶ್ನೆಯನ್ನು ಎತ್ತಿ ರಾಷ್ಟ್ರಪತಿಯವರು ಮತ್ತು ರಾಜ್ಯಪಾಲರು ಇವರನ್ನು ನೇಮಕ ಮಾಡುತ್ತಾರೆ; ಆ ನೇಮಕ ಮಾಡುವ ಅಧಿಕಾರ ಇರುವಂಥ ಅಧಿಕಾರಿಗಳಿಗೇನೇ ತೆಗೆದುಹಾಕುವಂಥ ಅಧಿಕಾರವೂ ಉಂಟು ಎಂದು ಅವರು ಹೇಳಿದ್ದಾರೆ. "Disciplinary powers ಅದು ನಿಜ. ಅದರ ಜೊತೆಗೇನೇ ರಾಜ್ಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ, ಅವುಗಳ ಕಾರ್ಯಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎನ್ನುವ ಮೂಲ ಉದ್ದೇಶದಿಂದ ನಾವು ಸಂವಿಧಾನದಲ್ಲಿ ಕೆಲವು ನಿಯಮಗಳನ್ನು ಹಾಕಿದ್ದೇವೆ. ಉದಾಹರಣೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲೀ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲೀ, ನಿವೃತ್ತಿಯಾದ ಮೇಲೆ, ಅವರು ಬೇರೆ ಯಾವುದೇ ಹುದ್ದೆಯನ್ನು ಸ್ವೀಕರಿಸಬಾರದು ಎನ್ನುವಂಥ ನಿಯಮವನ್ನು ನಿಷೇಧವನ್ನು ನಾವು ಸಂವಿಧಾನದಲ್ಲಿ ಹಾಕಿರುವ ಉದ್ದೇಶ to procect the independence of the judiciary. ಅದೇ ರೀತಿಯಲ್ಲಿ ನಾವು ಲೋಕಸೇವಾ ಆಯೋಗಗಳಿಗೂ ಹಾಕಿಕೊಂಡಿದ್ದೇವೆ. Paragraph 3 of Article 316. This is most important provision relating to the Public Service Commissions or the states and UPSC.

"A person who holds office is a member of the P.S.C. shall on the expiration of his term of office be ineligible for reappointment to that office".

ಇದನ್ನು ನಾವು ಸೇರಿಸಿರುವುದು ಈ ಸಂಸ್ಥೆಗಳ ಸ್ವಾತಂತ್ರ್ಯವನ್ನು ರಕ್ಷಣೆ ಮಾಡುವುದಕ್ಕೋಸ್ಕರವಾಗಿ. ಅಂದರೆ ರಾಜ್ಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ, ಅವುಗಳ ಕಾರ್ಯಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎನ್ನುವುದಕ್ಕೆ ನಿಸೇದ 317ರಲ್ಲಿ ಇದೆ.

"Article 317 of the Constitution provides for the removal and suspension of a Member of Public Service Commission" 317 paragraph 1 says "subject to the provisions of Clause 3 the Chairman or any other member of Public Service Commission shall only be removed from his office by order of the President on the ground of mis-behaviour after the Supreme Court on reference being made to it by the President as on enquiry held in accordance with the procedure prescribed in that behalf under Article 145, reported that the Chairman or such other member as the case may be ought or any other ground be removed".
ರಾಷ್ಟ್ರಾಧ್ಯಕ್ಷರೂ ಕೂಡ ಏನೇ ಕ್ರಮ ತೆಗೆದುಕೊಳ್ಳಬೇಕಾದರೂ ಲೋಕಸೇವಾ ಆಯೋಗದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಿಂದ ವರದಿ ತರಿಸಿಕೊಂಡು ನಂತರ ಕ್ರಮ ತೆಗೆದುಕೊಳ್ಳಬೇಕು.

ಮಾಡಬೇಕು. ಇಲ್ಲಿ ರಾಷ್ಟ್ರಾಧ್ಯಕ್ಷರೇ ನೇಮಕ ಮಾಡುವ ಅಧಿಕಾರಿಯಾದರೂ ಆತನ ವಿರುದ್ಧ ಏನೇ ಕ್ರಮ ತೆಗೆದುಕೊಳ್ಳುವಾಗ ಮುಂಚೆ ಸುಪ್ರೀಂಕೋರ್ಟ್‌ನಿಂದ ವರದಿ ತರಿಸಿಕೊಂಡ ನಂತರ ಕ್ರಮ ತೆಗೆದುಕೊಳ್ಳಬೇಕು.

The samething applies to the Members of the State Public Service Commison also.

ಇದನ್ನು ಹುಡುಗಾಟಿಕೆಗಾಗಿ ಸಂವಿಧಾನದಲ್ಲಿ ಸೇರಿಸಿಲ್ಲ. ನಾನು ಮೊದಲು ಕಾನೂನು ಸಚಿವರಿಗೆ ನಿಮ್ಮ ಮೂಲಕ ಪ್ರಶ್ನೆ ಹಾಕುವುದು, ಈ ಸಚಿವ ಸಂಪುಟಕ್ಕೆ ಏನು ವರದಿಯಾಗಿದೆ ಆ ತೀರ್ಮಾನ ತೆಗೆದುಕೊಳ್ಳುವ ಹಕ್ಕು ಎಲ್ಲಿ ಬಂತು ಅಂತ ಆ ವಿವರಣೆ ಕೊಡಬೇಕು; ಅದನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಅವರು ಮೊದಲು ಲೋಕಸೇವಾ ಆಯೋಗಕ್ಕೆ ಮತ್ತು ಈ ಸಂವಿಧಾನಕ್ಕೆ ಕ್ಷಮಾರ್ಪಣೆ ಕೇಳಲಿ ಆನಂತರ ಸಚಿವ ಸಂಪುಟ ಪುನರ್‌ವಿಮರ್ಶೆ ಮಾಡಲಿ.

Mr. Speaker : Let's hear the Law Minister . He feels that it would be easier for you.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೇ, I would try to help him. ರಾಜ್ಯಾಂಗದತ್ತವಾದ ಹಕ್ಕುಬಾಧ್ಯತೆಗಳ ಬಗ್ಗೆ ಪ್ರೊ. ನಂಜುಂಡಸ್ವಾಮಿಯವರು ಸಾಕಷ್ಟು ವಿಸ್ತಾರವಾಗಿ ಹೇಳಿದ್ದಾರೆ. ನಾನು ಆ ಭಾಗ ಟಚ್ ಮಾಡಲು ಹೋಗುವುದಿಲ್ಲ. ರಾಜ್ಯ ಸರ್ಕಾರಕ್ಕೆ ಆಯ್ಕೆ ಮಾಡುವ ಹಕ್ಕು ಏನಿದೆ ಅದನು ಸರ್ವಿಸ್ ಕಮೀಷನ್‌ಗೆ ಕೊಡುವುದನ್ನು ವಾಪಸ್ ಪಡೆಯುವ ಅಧಿಕಾರ ಇಲ್ಲಾಂತಲೂ ನಾನು ಹೇಳುವುದಿಲ್ಲ. I concede that position so far as the State Government is concerned. But the question is, ರಾಜ್ಯದ ಮಂತ್ರಿಮಂಡಲದ ಸಭೆ ಮಾಡುವ ತೀರ್ಮಾನಗಳು ಸಾಧಾರಣವಾಗಿ ಪತ್ರಿಕೆಗಳಿಗೆ ಬಿಡುಗಡೆ ಮಾಡುವ ಜವಾಬ್ದಾರಿ ವಾರ್ತಾ ಸಚಿವರಿಗೆ ಸೇರಿದ್ದು ಆದರೂ ಕೂಡ ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಿದ್ದಾರೆ ಅಂತ ಭಾವನೆ ಮಾಡ್ತೀನಿ. ಇದು ಯಾರೋ ಹೇಳಿದ್ದಲ್ಲ. it is a briefing in the Press. While briefing in the Press, he makes an allegation to the effect ಪಬ್ಲಿಕ್ ಸರ್ವೀಸ್ ಕಮೀಷನ್‌ನವರು ಭ್ರಷ್ಟಾಚಾರ ಮಾಡಿದ್ದಾರೆ ಆ ಕಾರಣಕ್ಕಾಗಿ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯನ್ನು ಕೆಪಿಎಸ್‌ಸಿ ಅಧ್ಯಕ್ಷರು ಮಾಡಿದ್ದಾರೆ. ನಾನು ಆ ವಿವರಗಳಿಗೆ ಹೋಗುವುದಿಲ್ಲ. ಆ ಪ್ರತಿಕ್ರಿಯೆ ಬಂದ ಮೇಲೆ ಮಂತ್ರಿಗಳು ಮೀಟಿಂಗಾದ ಮೇಲೆ ಇವರು ಅದನ್ನು ಅಲ್ಲಗಳೆದಿಲ್ಲ. ಇದು ಒಂದು ಆಸ್ಪೆಕ್ಟ್ I have the information that some of the cabinet Ministers have regined their posts. ಇದು ಅಘರಾದ ಅಂತ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. It should go to the record. Spoke to the

Members of the Public Service Commission. I have the information that some of the Members have submitted their resignation.

(ಗೊಂದಲ)

Sri D.B. Chandre Gowda : I have the full information that one or two of the Public Service Commission members have resigned and the Public Service Commission full body is meeting right now to take a final decision. ಇದು ಚರ್ಚೆಯಾಗಬೇಕೋ ಬೇಡವೋ ಮೊದಲು ತೀರ್ಮಾನವಾಗಲಿ. It is a vital important matter. I want a clear statement on this question and than kidly allow us to take it up. ಇದರ ಬಗ್ಗೆ ವಿಸ್ತಾರವಾದ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ನಿಮ್ಮನ್ನು ಕರೆಯುತ್ತೇನೆ, ಅವರೇನೊ ಪ್ರೀಮಿಸರಿ ಸಬ್‌ಮಿಷನ್ ಮಾಡುತ್ತಾರೆ.

ಶ್ರೀ ಎಂ. ಬ್ಲೇಸಿಯಸ್ ಡಿಸೋಜ : (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, this notice has been presented to you at 9.45 AM. It should be atleast one hour before the starting of the Session.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ತಾಂತ್ರಿಕತೆ ಬಗ್ಗೆ ಬೇಡಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಬೇಕು. ಕಾನೂನು ಸಚಿವರು ಈಗಾಗಲೇ ಅವರ ಕಾಲ ಮೇಲೆ ಇದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ಈ ನಿಲುವಳಿ ಸೂಚನೆಯ ಬಗ್ಗೆ ನಾವು.....

(ಗೊಂದಲ)

ಅಧ್ಯಕ್ಷರು : ಕಾನೂನು ಸಚಿವರು ಈಗಾಗಲೇ ಅವರ ಕಾಲ ಮೇಲೆ ಇದ್ದಾರೆ. ಅವರ ಕಾಲು ಸೋಲುವವರೆಗೂ ನಾನು ನಿಮಗೆ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ನಾವು ಎದ್ದು ಎದ್ದು ಕುಳಿತುಕೊಳ್ಳುತ್ತಿದ್ದೇವೆ, ನಮ್ಮ ಕಾಲಿಗೂ ಕೂಡ ನೋವಾಗುತ್ತಿದೆ.

Sri Blasius M. D'souza : Normally one hour notice has to be given as per the rules and as such, we have not been given. I got this adjournment motion just now.

Mr. Speaker : Shall we take it up tomorrow ?

Sri Blasius D'souza : We can take it up tomorrow. Yes.

Sri D.B. Chandregowda : We will congratulate the Minister for having accepted to take up this matter tomorrow.

(ಗೊಂದಲ)

Sri Blasius M. D'souza : But not this notice.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂದು ಹೇಳುವುದಕ್ಕೆ ನಿಮಗೆ ಏನು ಅಧಿಕಾರ ಇದೆ ?

(ಗೊಂದಲ)

Sri. Blasius M. D'souza : If the notice has been given in proper time, we would have taken notice of it and we would have replied for it. But now notice has come only at 9-45 AM. It has only come to me five minutes back. So, I request you Mr. Speaker Sir, not to entertain this at all.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕಾನೂನು ಸಚಿವರು ಈ ನಿಯಮಗಳನ್ನು ಅಧ್ಯಕ್ಷರ ಅನುಮತಿ ಮೇರೆಗೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ನಿಲುವಳಿ ಸೂಚನೆಯನ್ನು ನಾವು ಚರ್ಚೆ ಮಾಡಬೇಕೇ ಇಲ್ಲವೇ ಎನ್ನುವ ಬಗ್ಗೆ ಇದನ್ನು ಒಪ್ಪಬೇಕು ಎಂದು ಹೇಳಿ ನಾವು ಕೇಳಿಕೊಂಡಿದ್ದೇವೆ. ಆ ಬಗ್ಗೆ ಚರ್ಚೆಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ......

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಈಗ ಈ ಒಂದು ಸಂದರ್ಭದಲ್ಲಿ ಇದಕ್ಕೆ ಕಾಲವನ್ನು ಬಹಳ ವಿಳಂಬ ಮಾಡಿದ್ದಾರೆ ಎಂದು ಹೇಳಿ ತಾಂತ್ರಿಕವಾಗಿ ಹೇಳತಕ್ಕಂಥದ್ದು ಅಲ್ಲ. ಆದುದರಿಂದ ನಮಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇದು ಬಹಳ ಗಂಭೀರವಾದ ಗುರುತರವಾದಂಥ ಪ್ರಶ್ನೆ. ಒಂದು ಕಡೆ ಇತಿಹಾಸದಲ್ಲಿ ಈ ರೀತಿ ಲೋಕಸೇವಾ ಆಯೋಗದ ಮೇಲೆ ಯಾವುದೇ ಸಚಿವ ಸಂಪುಟ ಇದುವರೆಗೂ ನಾನು ತಿಳಿದಮಟ್ಟಿಗೆ ಈ ರೀತಿಯಾದಂಥ ಕ್ರಮವನ್ನು ಕೈಗೊಂಡಿರತಕ್ಕಂಥದ್ದು ಕರ್ನಾಟಕದ ಚರಿತ್ರೆಯಲ್ಲೇ ಇಲ್ಲ. ಇದು ಪ್ರಪ್ರಥಮವಾಗಿ ಒಂದು ವಿಶೇಷವಾದಂಥ ಗುಣವನ್ನು ಹೊಂದಿರತಕ್ಕಂಥದ್ದು. ಆದುದರಿಂದ ತಮಗೆ ನಾನು ಹೇಳುತ್ತಿದ್ದೇನೆ, ಇದು ಎರಡು ಸಾವಿರದ ಐದುನೂರು ಮುಖ್ಯೋಪಾಧ್ಯಾಯರುಗಳ ಬಗ್ಗೆ ಈಗಾಗಲೇ ಒಂದು ಸಾವಿರ ಜನರ ಸಂದರ್ಶನ ನಡೆದುಹೋಗಿದೆ. ಮತ್ತು ಅಲ್ಲಿ ಅಧ್ಯಕ್ಷರು ಅವರೇ ಹೇಳಿರುವ ಪ್ರಕಾರ.....

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ : ಆ ನಿಯಮ ಸ್ವಲ್ಪ ಹೇಳಿ, ಶ್ರೀ ಬಿ.ಎಸ್. ಯಡಿಯೂರಪ್ಪ 60ರ ಪ್ರಕಾರ "ಯಾವ ದಿನದಂದು ನಿಲುವಳಿ ಸೂಚನೆಯನ್ನು ತರಲು ಉದ್ದೇಶಿಸಲಾಗಿದೆಯೋ, ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕೆಳಕಂಡವರಿಗೆ ಎಂದರೆ : (1) ಅಧ್ಯಕ್ಷರು, (2) ಸಂಬಂಧಪಟ್ಟ ಮಂತ್ರಿಗಳು (3) ಕಾರ್ಯದರ್ಶಿ ಇವರೆಲ್ಲರಿಗೂ ನಿಲುವಳಿ ಸೂಚನೆಯನ್ನು ಕೊಡತಕ್ಕದ್ದು." ಎಂದಿದೆ.

ಅಧ್ಯಕ್ಷರು : ಯಾವ ದಿನದಂದು ನಿಲುವಳಿ ಸೂಚನೆಯನ್ನು ತರಲು ಉದ್ದೇಶಿಸಲಾಗಿದೆಯೋ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭೆ ಸೇರುವುದಕ್ಕೆ ಮುಂಚೆ ನಾವು ನೋಟೀಸ್ ಕೊಟ್ಟರೆ ಸಾಕು.

ಅಧ್ಯಕ್ಷರು : ಆ ದಿನದ ಉಪವೇಶನ, ಪ್ರಾರಂಭವಾಗುವುದಕ್ಕೆ ಮುಂಚೆ ಕೆಳಕಂಡವರು ಅಂದರೆ ಅಧ್ಯಕ್ಷರು, ಸಂಬಂಧಪಟ್ಟ ಮಂತ್ರಿಗಳು ಮತ್ತು ಕಾರ್ಯದರ್ಶಿ, ಇವರೆಲ್ಲರಿಗೂ ನಿಲುವಳಿ ಸೂಚನೆಯನ್ನು ಕೊಡತಕ್ಕದ್ದು ಎಂದು ಇದೆ. ಅವರಿಗೆ ಕೊಟ್ಟಿದ್ದಿರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರೆಲ್ಲರಿಗೂ ಕಳುಹಿಸಿಕೊಟ್ಟಿದ್ದೇನೆ. ಅವರ ಆಫೀಸಿಗೆ ಹೋಗಿ ಕೊಟ್ಟುಬಿಟ್ಟು ಬಂದಿದ್ದೇನೆ. ಅವರು....

ಅಧ್ಯಕ್ಷರು : ಅವರಿಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಎಲ್ಲಿ ಇರುತ್ತಾರೆ ಸಾರ್ ? ಯಾರು ಇದ್ದಾರೆ. ನಾನು 9 ಗಂಟೆಗೆ ಬಂದು ತಮ್ಮನ್ನು ಮಾತ್ರ ಭೇಟಿ ಮಾಡಿದೆ. ಅವರ ಆಫೀಸಿಗೆ ಕಾಪಿಯನ್ನು ಕಳುಹಿಸಿಕೊಟ್ಟಿದ್ದೇನೆ.

(ಭಾರಿ ಗೊಂದಲ)

ಅಧ್ಯಕ್ಷರು : ಆಫೀಸುಗಳಲ್ಲಿ ಯಾರು ಇರುತ್ತಾರೆ ಅನ್ನತಕ್ಕದ್ದು ವಿತ್ತಂಡವಾದವಾಗುತ್ತದೆ.

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಇಂತಹ ಗುರುತರವಾದಂತಹ ವಿಚಾರವನ್ನು ತಳ್ಳಿಹಾಕತಕ್ಕದ್ದಲ್ಲ.

(ಭಾರಿ ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಲೋಕಸೇವಾ ಆಯೋಗವನ್ನು ಜಿಲ್ಲಾ ಪರಿಷತ್ತಿನ ನೇಮಕಾತಿ ಸಮಿತಿ ಎಂದು ಇವರು ತಿಳಿದುಕೊಳ್ಳಬಾರದು.

ಅಧ್ಯಕ್ಷರು : ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು ಇವುಗಳು ಕೂಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ಕೊಟ್ಟಿರುವುದು.

ಶ್ರೀ ಆರ್. ದಯಾನಂದರಾವ್ : ಯಾವುದೇ ನೋಟಿಸ್ ಕೊಡಬೇಕಾದರೆ ಸ್ವಲ್ಪ ಟೈಂ ಕೊಡಬೇಕು. ಮಂತ್ರಿಗಳು ತಯಾರಾಗಿ ಬರಬೇಕಾದರೆ ಸ್ವಲ್ಪ ಟೈಂ ಕೊಡಬೇಕು.

Mr. Speaker : I uphold his abjection. ಸ್ವಲ್ಪ ಸಮಯ ಕೊಡಬೇಕಾಗುತ್ತದೆ. I am referring to Kaul and Shakdher practice & Procedure of Parliament, page-445. It reads thus.

"Notice of an adjournment motion has to be given before the commercial of the sitting on the day on which the motion is proposed to be made to each of the following the speaker, the Minister concerned & the Secretary."

ಸ್ಪೀಕರ್, ಸೆಕ್ರಟರಿ ಬಿಟ್ಟು ಬಿಡಲಿ. The minister concernedಗೆ ನನ್ನ ಆಫೀಸಿಗೆ ನೀವು ಕೊಟ್ಟಿರತಕ್ಕದ್ದು ಕೂಡ 9.45. ರಲ್ಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ನಾವೇ ರಚಿಸಿಕೊಂಡಿರುವ ರೂಲ್ಸ್ ಪ್ರಕಾರ ಏನಿದೆ ಅಂದರೆ ಯಾವ ದಿನದಂದು ನಿಲುವಳಿ ಸೂಚನೆಯನ್ನು ತರಲು ಉದ್ದೇಶಿಸಲಾಗಿದೆಯೋ ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕೆಳಕಂಡವರಿಗೆ ಅಂದರೆ ಅಧ್ಯಕ್ಷರು, ಸಂಬಂಧಪಟ್ಟ ಮಂತ್ರಿಗಳು ಕಾರ್ಯದರ್ಶಿಯವರಿಗೆ ಕೊಡಬೇಕು. ಒಂದು ಗಂಟೆಗೆ ಮುಂಚೆ ಅಂತ ಎಲ್ಲೂ ಇಲ್ಲ. ನಾನು ನಿಮಗೆ ಸಮಯಕ್ಕೆ ಸರಿಯಾಗಿ ಕೊಟ್ಟಿದ್ದೇನೆ. ಈ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಕೊಟ್ಟಿದ್ದೇನೆ. ನಾನು ಮತ್ತು ನನ್ನ ಮಿತ್ರರಾದಂತಹ ಈಶ್ವರಪ್ಪನವರು ಹೋದಾಗ ಮಂತ್ರಿಗಳ ಕಚೇರಿಯ ಬಾಗಿಲು ತೆಗೆದಿರಲಿಲ್ಲ. ನಾನು ಏನು ಮಾಡಲಿ, ಈ ಪರಿಸ್ಥಿತಿಯಲ್ಲಿ ನಾನು ಕಚೇರಿ ಒಳಗಡೆ ನೋಟೀಸ್ ಹಾಕಿ ಬಂದಿದ್ದೇನೆ. ಮಾನ್ಯ ಕಾನೂನು ಮಂತ್ರಿಗಳು ಹೇಳಿದ ಪ್ರಕಾರ ಒಂದು ಗಂಟೆ ಮುಂಚೆ ನಿಯಮಾವಳಿಯ ಪ್ರಕಾರ ಕೊಡಬೇಕಾಗಿಲ್ಲ. ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆನೆ ತಲುಪಿದರೆ ಸಾಕು, ಅದರ ಮಹತ್ವವನ್ನು ಅರಿತು ತಾವು ಆಲೋಚನೆ ಮಾಡಿದ್ದೀರಾ? ಆದ್ದರಿಂದ ಈ ಹಂತದಲ್ಲಿ ಮಂತ್ರಿಯವರು ತಪ್ಪಿಸಿಕೊಳ್ಳುವಂತಹ ಪ್ರಯತ್ನ ಮಾಡುವುದು ಬೇಡ. ಈ ನಿಯಮಾವಳಿಗಳ ಅನುಸಾರವಾಗಿ ನಾನು ಸಮಯಕ್ಕೆ ಸರಿಯಾಗಿ ಕಾನೂನು ಚೌಕಟ್ಟಿನಲ್ಲಿ ತಮಗೆ ನೋಟೀಸ್ ತಲುಪಿಸಿದ್ದೇನೆ. ಸಂಬಂಧಪಟ್ಟ ಸಚಿವರಿಗೂ ತಲುಪಿಸಿದ್ದೇನೆ. ಕಾರ್ಯದರ್ಶಿಯವರಿಗೂ ಸಲ್ಲಿಸಿದ್ದೇನೆ. ಆದ್ದರಿಂದ ಇವತ್ತು ಇಷ್ಟು ಮಹತ್ವವಾಗಿರತಕ್ಕಂಥ ಸಂಗತಿಯ ಬಗ್ಗೆ ತಾವು ಅದನ್ನು ಅರಿತೇ ಇವತ್ತು ತಾವು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅಲೋ ಮಾಡಿದ್ದೀರಿ. ಈಗ ಈ ಹಂತದಲ್ಲಿ ಮಂತ್ರಿಮಂಡಲದ ಸಭೆಯಲ್ಲಿ ಈ ತೀರ್ಮಾನವನ್ನು ಹೇಗೆ ತೆಗೆದುಕೊಂಡರು? ಇವರು ಕಾನೂನು ಚೌಕಟ್ಟನ್ನು ಮೀರಿ ಸಂವಿಧಾನದ ಚೌಕಟ್ಟನ್ನು ಮೀರಿ ಹೋಗಿರುವ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಸನ್ಮಾನ್ಯ ಬಿಡಪ್ ಅವರು ಚೇರ್‌ಮನ್ ಆಗಿದ್ದಾಗ...

Sri A.K. Ananthakrishna : The Hon. Member is going into the merits of the case.

ಅಧ್ಯಕ್ಷರು : ಈಗ ತತ್‌ಕ್ಷಣದಲ್ಲಿ ನಾವು ನಮ್ಮ ರೂಲ್ಸ್ ಅನ್ನು ವಿಶ್ಲೇಷಣೆ ಮಾಡುತ್ತಿರಬೇಕಾದರೆ, ಬಿಡಪ್ ಅವರ ಪ್ರಶ್ನೆ ಈಗ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದೇ ಉಪವೇಶನದಲ್ಲಿ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಗಳನ್ನು ಸಲ್ಲಿಸತಕ್ಕದ್ದು. ಒಂದೇ ಇದೇ ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಚರ್ಚಿಸಕೂಡದು. ಚರ್ಚಿಸುವುದಕ್ಕೆ ಹೋಗುವುದಿಲ್ಲ.

Mr. Speaker : Kaul & Shakdher ಪುಟ 445ನ್ನು ನೋಡಿ. It reads thus :

"Notice of an Adjournment Motion has to be given before the commencement of the sitting on the day on which the motion is proposed to be made to the Speaker the Minister concerned, and the Secretary."

The expression used here is, "before the commencement of the sitting". I would request the Hon. Minister for Law to get hold a copy of the Practice & Procedure of Parliament by Kaul and Shakdher and go through page-445. Further it is observed thus :

"The expression 'before the commencement of the sitting in the Rules means a reasonable time before the commencement of the sitting so that the notice could reach the Speaker in his office before he goes to occupy the Chair at the commencement of the sitting. "Before the commencement of a session, notices can at the earliest be given only after a day fixed in advance and notified in the Bulletin."

Therefore, we have to interest as to what is "reasonable time" in a particular context.

ಶ್ರೀ ಬಿ.ಎಚ್. ಬನ್ನಿಕೋಡ್ : ಇದು ಮಂತ್ರಿಮಂಡಲದ ನಿರ್ಣಯ. ಕಾನೂನು ಸಚಿವರಿಗೆ ಇದೇನೂ ಹೊಸದಲ್ಲ.

Sri D.B. Chandregowda : Before you conclude, may I make a submission ?

ಅಧ್ಯಕ್ಷರು : ನಾನು ಇನ್ನೂ ಕನ್‌ಕ್ಲೂಡ್ ಮಾಡಿಲ್ಲ. 446ನೇ ಪುಟದಲ್ಲಿ ಏನಿದೆಯೆಂದರೆ,

"It has been laid down that notices of adjournment motion received upto 10.00 hours are valid for that day. In case, copies of notice are delivered aftr 10.00 hours at the parlimentary notice office, the notice is not deemed to have been received in time and treated as a Notice given for the next sitting".

ಶ್ರೀ ಬಿ.ಎಸ್. ಯಡಿಯೂರಪ್ಪ : ರೂಲ್ಸ್ ಅನ್ನು ಸಸ್ಪೆಂಡ್ ಮಾಡಿ, ಇದರ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ತಮಗೂ ಅಧಿಕಾರವಿದೆ. ಅದು ಯಾವುದೇ ಸಂದರ್ಭದಲ್ಲಿ ಬರಬಹುದು.

ಅಧ್ಯಕ್ಷರು : ಅದು ಎಕ್ಸ್‌ಟ್ರಾರ್ಡಿನರಿ ಸಿಚುಯೇಷನ್‌ನಲ್ಲಿ ಮಾತ್ರ ಬರುತ್ತದೆ.

(ಗೊಂದಲ)

Sri D.B. Chandregowda : t is the propriety of this hours. ತಾವು ಈ ದಿವಸ ಅಧಿವೇಶನವನ್ನು 10.00 ಗಂಟೆಗೆ ಕರೆದಿದ್ದೀರಿ. 10.00 ಗಂಟೆಗೆ ಕರೆದಿದೆ ಎನ್ನತಕ್ಕಂಥಾದ್ದೇ ಸರ್ಕಾರಕ್ಕೆ ನೋಟೀಸು. They should all be ready by 9.00 AM. Anything they may receive as rightly pointed out by the Hon'ble Members of this House. 9 ಗಂಟೆಗೆ ನಾವು ಮಂತ್ರಿಯವರ ಕಚೇರಿಯಲ್ಲಿದ್ದೆವು. ಇದನ್ನು ನಾನು ಆಪಾದನೆಯೆಂದು ಹೇಳುವುದಿಲ್ಲ.

ಅಧ್ಯಕ್ಷರು : *9.00 ಗಂಟೆಗೆ ನೀವು ಸಿದ್ಧವಾಗಿರಲಿಲ್ಲ.*

ಶ್ರೀ ಡಿ.ಬಿ. ಚಂದ್ರೇಗೌಡ : ನಿನ್ನೆ ಬೆಳಿಗ್ಗೆಯಿಂದ ಕುಳಿತುಕೊಂಡು ಎಕ್ಸರ್‌ಸೈಜ್ ಮಾಡಿ ನೋಟೀಸ್ ತಯಾರು ಮಾಡಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರೇ ಸಾಕ್ಷಿ. ನಮ್ಮ ಮನೆಯಲ್ಲಿ ಕುಳಿತುಕೊಂಡು ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ನಾವು ಸಿದ್ಧವಾಗಿರಲಿಲ್ಲ ಎನ್ನತಕ್ಕಂಥ ಮಾತು ತಮ್ಮಿಂದ ಬರಬಾರದು. We were ready. We prepared the Notice Yesterday itself.

ಅಧ್ಯಕ್ಷರು : ನೀವು ನನ್ನ ಆಫೀಸಿಗೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇದರ ಬಗ್ಗೆ ತಮ್ಮ ಹತ್ತಿರ ಬಂದು ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು : ಇಲ್ಲಿ ನನ್ನ ಹತ್ತಿರ ಬರುವ ಪ್ರಶ್ನೆಯೇ ಇಲ್ಲ. ನೀವು ನೋಟೀಸ್ ಆಫೀಸಿಗೆ 9.45 ಗಂಟೆಗೆ ಕೊಟ್ಟಿದ್ದೀರೆಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ತಮ್ಮನ್ನು ಕನ್‌ವಿನ್ಸ್ ಮಾಡುವ ಉದ್ದೇಶ ಇಷ್ಟೆ. ರೂಲ್ಸ್ ಬಹಳ ಸ್ಪಷ್ಟವಿದೆ. "ಯಾವ ದಿನದಂದು ನಿಲುವಳಿ ಸೂಚನೆಯನ್ನು ತರಲು ಉದ್ದೇಶಿಸಲಾಗಿದೆಯೋ, ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಕೆಳಕಂಡವರಿಗೆ ನೋಟೀಸ್ ಕೊಡಬೇಕು.'' ಎಂದು ಇದೆ. 9.45 ಗಂಟೆಗೆ ಕೊಟ್ಟರೆ ತಪ್ಪೇನಿದೆ? ಇವೊತ್ತು ಅಧಿವೇಶನವು 10.00 ಗಂಟೆಗೆ ಪ್ರಾರಂಭವಾಗಬೇಕು. ನಾನು 9.15 ಗಂಟೆಯಲ್ಲಿ ಕಾರ್ಯದರ್ಶಿಯವರ ಕಚೇರಿಯಲ್ಲಿ ಕುಳಿತಿದ್ದೆ. ಅವರು 9.30 ಗಂಟೆಗೆ ಬಂದ ತಕ್ಷಣ ಅವರಿಗೆ 9.45 ಗಂಟೆಗೆ ನೋಟೀಸ್ ಕೊಟ್ಟು ಮಂತ್ರಿಗಳ ಕಚೇರಿಗೆ ಹೋದೆ. ಮಂತ್ರಿಯವರ ಕಚೇರಿಯಲ್ಲಿ ಯಾರೂ ಇರದಿದ್ದುದರಿಂದ ಅಲ್ಲಿಂದ ಹೊರಟು ನಾನು ನಿಮ್ಮ ಹತ್ತಿರ ಬಂದು ಕುಳಿತುಕೊಂಡೆ. ಪ್ರಶ್ನೆ ಇದಲ್ಲ. ಇದುವರೆಗೆ ನಡೆದುಕೊಂಡು ಬಂದ ಪದ್ಧತಿ ಇದಾಗಿದೆ. ಅಲ್ಲದೆ, ಹೊರಗಡೆ ಗೊತ್ತಿಲ್ಲದೆ ನಿಲುವಳಿ ಸೂಚನೆಯನ್ನು ಕೊಟ್ಟು, ಅದಕ್ಕೆ ತಾವು ಅಲೋ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ.

ಶ್ರೀ ಕೆ.ಎಚ್. ರಂಗನಾಥ್ : ಯಡಿಯೂರಪ್ಪನವರೇ, ಅಧ್ಯಕ್ಷರು ತಮ್ಮ ಕಚೇರಿಗೆ ನಿಲುವಳಿ ಸೂಚನೆ 9.45 ಗಂಟೆಗೆ ಬಂದಿದೆಯೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಪ್ಪು ಎಲ್ಲಿದೆ? ರೂಲ್ಸ್‌ನಲ್ಲಿ ನಿಲುವಳಿ ಸೂಚನೆಯನ್ನು 9.45 ನಿಮಿಷಕ್ಕೆ ಕೊಡಬಾರದು ಎಂದಿದ್ದರೆ ನಾನು ಪ್ರಸ್ತಾಪ ಮಾಡುತ್ತಿರಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್ : ಇಷ್ಟು ಸಣ್ಣ ವಿಚಾರಕ್ಕೆ ಏಕೆ ಜೋರಾಗಿ ಮಾತನಾಡುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಗಂಟಲೇ ಜೋರು. ವಿಷಯ ಅದಲ್ಲ. ಬೇಕಾದರೆ ಶ್ರೀ ರಂಗನಾಥ್‌ರವರು ನನಗೆ ಕನ್‌ವಿನ್ಸ್ ಮಾಡಲಿ. 10.00 ಗಂಟೆಗೆ ಅಧಿವೇಶನ ಪ್ರಾರಂಭವಾಗಲಿದ್ದು, ಅದಕ್ಕೆ ಮುಂಚಿತವಾಗಿ ಅಂದರೆ, ನಾನು 9.45 ಗಂಟೆಗೆ ಕೊಟ್ಟಿರುವ ನಿಲುವಳಿ ಸೂಚನೆ ಸರಿಯಲ್ಲವೆಂದು ಅವರು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ನಿಮ್ಮ ನಿಲುವಳಿ ಸೂಚನೆ 9.45 ಗಂಟೆಗೆ ತಲುಪಿದೆ. ಮಾನ್ಯ ಅಧ್ಯಕ್ಷರು ರೀಸನಬಲ್ ಟೈಮ್ ಏನೆಂದು ಹೇಳುತ್ತಿದ್ದಾರೆ. ಮತ್ತೆ ಈ ವ್ಯಾಖ್ಯಾನ ಏಕೆ? ಸುಮ್ಮನಿರಿ. ನಿಮ್ಮ ನಿಲುವಳಿ ಸೂಚನೆ 9.45ಕ್ಕೆ ತಲುಪಿದೆಯೆಂದು ಮಂತ್ರಿಗಳು ಹೇಳಿದರು. ನಿಲುವಳಿ ಸೂಚನೆಯನ್ನು ಒಂದು ಗಂಟೆ ಮುಂಚಿತವಾಗಿ ಕೊಡಬೇಕೆಂದು, ಇಲ್ಲವೇ ರೀಸನಬಲ್ ಟೈಮ್‌ನಲ್ಲಿ ಕೊಡಬೇಕೆಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾಂತ್ರಿಕ ಕಾರಣ ಎತ್ತಿ ಈ ವಿಚಾರದ ಬಗ್ಗೆ ಪ್ರಸ್ತಾಪಿಸುವುದು ಬೇಡ.

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮುಂಚಿತವಾಗಿ ಹೇಳಿದೆ. ತಾವು ಇದಕ್ಕೆ ಅವಕಾಶ ಕೊಡುವುದಕ್ಕಿಂತ ಮುಂಚಿತವಾಗಿ ಇದು ವಾಸ್ತವಾಂಶವೇ ಹೇಗೆ ಎಂಬುದನ್ನು ಮಂತ್ರಿಗಳಿಂದ ಕೇಳಿ ಎಂದೆ. ಏತಕ್ಕೆಂದರೆ, We are also equally interested. ಕೆ.ಪಿ.ಎಸ್.ಸಿ.ಗೆ ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ಗೌರವ ಕೊಡಬೇಕೋ, ಅಷ್ಟನ್ನು ಈ ಸದನದಿಂದ ಕೊಡತಕ್ಕಂಥ ವ್ಯವಸ್ಥೆ ಆಗಬೇಕಾಗುತ್ತದೆ. ಮತ್ತು ಅದರ ಬಗ್ಗೆ ಏನೇ ಅಪಾದನೆಗಳನ್ನು ಮಾಡುವಾಗಲೂ ಕೂಡ

ನಾವು ಕಾನೂನಿನ ಚೌಕಟ್ಟಿನೊಳಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಅದಿಲ್ಲದೆ ಒಂದು ವೇಳೆ ಮಂತ್ರಿಮಂಡಲದಿಂದ ಆಪಾದನೆ ಬಂದು, ಆ ಕಾರಣಕ್ಕಾಗಿ ನಿಲ್ಲಿಸಿದರೆ ಅದರ ಬಗ್ಗೆ ಈ ಸಭೆ ಬಹಳ ತೀವ್ರವಾಗಿ ವಿಚಾರ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳಿದ್ದು. ಈ ವಿಷಯವನ್ನು ಚರ್ಚೆ ಮಾಡಬಾರದೆಂದಲ್ಲ. ಈಗ ನಾವು ಏನು ಮಾಡುತ್ತಿದ್ದೇವೆಂದರೆ, ಯಾವಾಗ ಮುಟ್ಟಿದ್ದು, ಯಾವಾಗ ಮುಟ್ಟಿಲ್ಲ, ಕೊಟ್ಟಿದ್ದನೇ, ಎದ್ದಿದ್ದನೇ, ಎದ್ದಿರಲಿಲ್ಲವೇ ? ಇಂತಹ ಪ್ರಶ್ನೆಗಳನ್ನು ಚರ್ಚೆ ಮಾಡುವ ಬದಲು ಪೂರ್ವಭಾವಿಯಾಗಿ ಈಗ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಕೇಳಿದರು. ಇದನ್ನು ಮಂತ್ರಿಮಂಡಲ ಒಪ್ಪಿಕೊಂಡಿದೆಯೇ ಹೇಗೆ ? ಒಪ್ಪಿಕೊಂಡಿದ್ದರೆ ಅದರ ರೂಪ ಬದಲಾಗುತ್ತದೆ. ಚರ್ಚೆಯ ವಿಷಯದ ಸ್ವರೂಪವೇ ಬದಲಾಗುತ್ತದೆ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಚರ್ಚೆಯಾಗಲಿ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ನೇರವಾಗಿ ಮಾಡಿರತಕ್ಕ ಆಪಾದನೆಗೆ ಸಂಬಂಧಪಟ್ಟ ಸಚಿವರು ಸರ್ಕಾರದ ಪರವಾಗಿ ಹೇಳುವುದೇನೆಂದರೆ, ಇಲ್ಲಿ ಅವ್ಯವಹಾರ ನಡೆದಿದೆ. ಭ್ರಷ್ಟಾಚಾರದ ಆರೋಪ ಬಂದಿದೆ, ಆ ಕಾರಣಕ್ಕೋಸ್ಕರವಾಗಿ ಸರ್ಕಾರ ಏನಾದರೂ ಅವರ ಪ್ರಕಾರ್ಯಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದರೆ ಸರ್ಕಾರ ಸ್ಪಷ್ಟವಾಗಿ ಈ ಸದನದಲ್ಲಿ ಹೇಳಿಕೆಯನ್ನು ನೀಡಬೇಕು. ತದನಂತರ ಅದರ ಬಗ್ಗೆ ಚರ್ಚೆಯಾಗಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆಪಾದನೆಗಳು ಶಾಸಕರಿಂದ ಬಂದಿದೆ ಎಂದು ಹೇಳುತ್ತಿದ್ದಾರೆ. ಆ ರೀತಿ ಬಂದಿದ್ದರೆ ಎಷ್ಟು ಪತ್ರಗಳು ಬಂದಿವೆ, ಯಾರ್ಯಾರು ಶಾಸಕರು ಆ ರೀತಿ ಪತ್ರಗಳನ್ನು ಬರೆದಿದ್ದಾರೆ ಆ ರೀತಿಯ ಪತ್ರಗಳು ನಿಮಗೆ ಬಂದಿದೆಯೋ, ಅದೇ ಇವತ್ತು ಬಹಳ ಮುಖ್ಯವಾದುದು.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಆ ಕಾರಣಕ್ಕೋಸ್ಕರವಾಗಿ ಅವರು ಪ್ರಕಾರ್ಯಗಳನ್ನು ವಾಪಸ್ ತೆಗೆದುಕೊಂಡಿದ್ದರೆ, ಅದರ ಬಗ್ಗೆ ಸ್ಪಷ್ಟವಾದಂಥ ಹೇಳಿಕೆಯನ್ನು ಸರ್ಕಾರ ಸದನದಲ್ಲಿ ಹೇಳಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಇದರ ಪರಿಣಾಮವಾಗಿ ಶಾಲೆಗಳಲ್ಲಿ ಕಲಿತ ಮಕ್ಕಳ ಗತಿ ಏನು? ರೋಸ್ಟರ್ ಸಿಸ್ಟಮ್‌ಗೆ ಏನಾದರೂ ತೊಂದರೆ ಬರುತ್ತದೆಯೇ? ಸದ್ಯಕ್ಕೆ ಯಾವುದೇ ಆಯ್ಕೆ ಸಮಿತಿಯು ಬೇಡ. ಭ್ರಷ್ಟಾಚಾರ ಎಲ್ಲೆಲ್ಲಿ ನಡೆದಿದೆಯೋ ಅದೆಲ್ಲಾ ಜಗತ್ತಿಗೇ ಗೊತ್ತಾಗಿರತಕ್ಕದ್ದು. ಆದರೆ ಈಗ ರೋಸ್ಟರ್ ಪದ್ಧತಿಯಲ್ಲಿ ಮೆರಿಟ್ ಆಧಾರದ ಮೇಲೆ ತಾತ್ಕಾಲಿಕವಾಗಿ ಆಯ್ಕೆಯನ್ನು ಮಾಡಿ ಭರ್ತಿ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ? ಭ್ರಷ್ಟಾಚಾರದ ಬಗ್ಗೆ ಸಚಿವ ಸಂಪುಟದಲ್ಲಿ ಹೇಳಿದೆಯೋ ಅಥವಾ ಇಲ್ಲವೋ ಪತ್ರಿಕೆಗಳಲ್ಲಿ ಸತ್ಯಾಂಶಗಳು ಬಂದಿದೆಯೋ ಇಲ್ಲವೋ? ಅದನ್ನು ಕಾನೂನು ಸಚಿವರು ಮೊದಲು ಸ್ಪಷ್ಟ ಮಾಡಲಿ ಇಲ್ಲದಿದ್ದರೆ ಈ ರಾಜ್ಯದಲ್ಲಿ ಗೊಂದಲಮಯ ವಾತಾವರಣವನ್ನು ನೀವೇ ನಿರ್ಮಾಣ ಮಾಡಿದಂತಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕೆ.ಪಿ.ಎಸ್.ಸಿ. ಯ ಅಧ್ಯಕ್ಷರು ಈ ಸರ್ಕಾರವು ಸ್ವೇಚ್ಛಾಚಾರವೆಂದು ಹೇಳಿದ್ದಾರೆ. ಅವರು ಆ ರೀತಿಯ ಪದವನ್ನು ನಿಮ್ಮ ಬೇಜವಾಬ್ದಾರಿಗೋಸ್ಕರವಾಗಿ ಬಳಸಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇನ್ನೊಂದು ಪ್ರಮುಖವಾದಂಥ ವಿಚಾರವೇನೆಂದರೆ, ಸರ್ಕಾರವೇ ಇವತ್ತಿನ ದಿವಸ ಒಂದು ಸಂಸ್ಥೆಯ ಮೇಲೆ ಭ್ರಷ್ಟಾಚಾರದ ಆರೋಪವನ್ನು ಹೊರಿಸುತ್ತಿದೆ. ಅದು ಪಿ.ಎಸ್.ಸಿ.ಯಾಗಿರಬಹುದು; ಸರ್ಕಾರವಾಗಿರಬಹುದು, ನಾನೇ ಆಗಿರಬಹುದು, ಅದು ಯಾರೇ ಆಗಿರಲಿ, ಅದು ಯಾರೇ ಒಬ್ಬ ಅಧಿಕಾರಿಯಾಗಿರಬಹುದು. ಕಾನೂನಿನ ರೀತಿಯಲ್ಲಿ ಭ್ರಷ್ಟಾಚಾರಕ್ಕೆ ತೊಡಗಿರತಕ್ಕದ್ದು ಅಪರಾಧ. ಈ ಅಪರಾಧಕ್ಕೆ ಸಂಬಂಧಪಟ್ಟವರು ಯಾರು? ಇವತ್ತು ನೇರವಾಗಿ

ಕೆ.ಪಿ.ಎಸ್.ಸಿ ಬಗ್ಗೆ ಆರೋಪವನ್ನು ಮಾಡಿದ್ದಾರೆ, ಇದರಲ್ಲಿಯೂ ಮಂತ್ರಿಮಂಡಲದ ಸಭೆಯಲ್ಲಿ ಈ ರೀತಿಯ ತೀರ್ಮಾನವಾಗಿದೆ. ಈ ರೀತಿ ತೀರ್ಮಾನವಾಗಿರತಕ್ಕ ಭ್ರಷ್ಟಾಚಾರದ ಆರೋಪದ ಮೇಲೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮವೇನು? ಈ ವಿಷಯ ಇವತ್ತು ಸಾರ್ವಜನಿಕ ಮಹತ್ವವಾಗಿರತಕ್ಕದ್ದು, ಇದನ್ನು ಈ ರಾಜ್ಯದ ಜನತೆಯು ತಿಳಿದುಕೊಳ್ಳಬೇಕಾಗಿದೆ. ಈ ರಾಜ್ಯ ಜನತೆಯ ಗಮನಕ್ಕೆ ಈ ವಿಷಯ ಹೋಗಬೇಕಾಗಿದೆ. ನಿಜವಾದಂಥ ಭ್ರಷ್ಟಾಚಾರಿಗಳು ಯಾರು? ಕೆ.ಪಿ.ಎಸ್.ಸಿಯವರು ಭ್ರಷ್ಟಾಚಾರಿಗಳೇ ಅಥವಾ ಈ ರೀತಿಯಾದ ಆರೋಪವನ್ನು ಮಾಡಿರತಕ್ಕವರು ಏನಾದರೂ ಕುತಂತ್ರದಿಂದ, ಅಥವಾ ಬೇರೆ ಉದ್ದೇಶದಿಂದ ಈ ರೀತಿಯಾದ ಆರೋಪವನ್ನು ಮಾಡಿದ್ದಾರೆಯೇ? ಇದು ಇವತ್ತಿನ ದಿವಸ ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ; ಮಾನ್ಯ ಮಂತ್ರಿಗಳು ಅಥವಾ ಸರ್ಕಾರದವರು ಈ ವಿಚಾರವನ್ನು ರಾಜ್ಯದ ಜನತೆಯ ಮುಂದೆ ಇಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಭ್ರಷ್ಟಾಚಾರದ ಆರೋಪವು ರುಜುವಾತಾಗಿದೆಯೇ ?

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್ : ಸನ್ಮಾನ್ಯ ಅಧ್ಯಕ್ಷರೇ ಈಗ ಕೆ.ಪಿ.ಎಸ್.ಯ ಅಧ್ಯಕ್ಷರನ್ನು ಮತ್ತು ಸದಸ್ಯರುಗಳನ್ನು ನಿಯುಕ್ತಿ ಮಾಡತಕ್ಕ ಅಥವಾ ಅವರನ್ನು ರಿಮೂವ್ ಮಾಡತಕ್ಕ ಅಧಿಕಾರವು ರಾಷ್ಟ್ರಾಧ್ಯಕ್ಷರಿಗೆ ಇದೆ. ಇದು ನಿರ್ವಿವಾದ. ಆದರೆ ಅದರ ಕಾರ್ಯವ್ಯಾಪ್ತಿಯಲ್ಲಿ ಸರ್ಕಾರವು ಇಂಟರ್‌ಫಿಯರ್ ಆಗಬಾರದು ಎನ್ನತಕ್ಕದ್ದು ನಿರ್ವಿವಾದ. ಅದನ್ನು ಯಾರೂ ಒಪ್ಪಿಕೊಳ್ಳುತ್ತಿಲ್ಲ. ಆದರೆ ಯಾವ್ಯಾವ ಇಲಾಖೆಗಳಿಗೆ ಎಷ್ಟು ಮಂದಿ ಬೇಕೆಂದು ಹೇಳಿ ನೇಮಕ ಸಮಿತಿಯನ್ನು ಮಾಡಿ ಅದಕ್ಕೆ ಆ ಕೆಲಸವನ್ನು ಎಂಟ್ರಸ್ಟ್ ಮಾಡತಕ್ಕ ಹಕ್ಕು ಸರ್ಕಾರಕ್ಕೆ ಇದೆ.

ಆದರೆ ಈಗ ಸರ್ಕಾರಕ್ಕೆ ಅದರ ಅವಶ್ಯಕತೆ ಇಲ್ಲವೆಂದರೆ ಅದನ್ನು ವಾಪಸ್ ಪಡೆಯತಕ್ಕ ಹಕ್ಕು ಇದೆ. ಇಲ್ಲಿ ಪ್ರಶ್ನೆ ಬಂದಿರುವುದಿಷ್ಟೆ: ಕೊಟ್ಟಿರತಕ್ಕಂಥ ಹಕ್ಕನ್ನು ವಾಪಸ್ ತೆಗೆದುಕೊಳ್ಳಲು ಕಾನೂನಿನ ಪ್ರಕಾರ ಅಭ್ಯಂತರವಿಲ್ಲ. ಆದರೆ ಇಲ್ಲಿ ಭ್ರಷ್ಟಾಚಾರದ ಆಪಾದನೆಯ ಆಧಾರದ ಮೇಲೆಯೇ ಅದನ್ನು ವಾಪಸ್ ತೆಗೆದುಕೊಂಡಿದ್ದೀರೋ ಅಥವಾ ಇಲ್ಲವೋ ಎನ್ನತಕ್ಕ ಪ್ರಶ್ನೆ ಬಂದಿದೆ. ಅದನ್ನು ಮಾನ್ಯ ಯಡಿಯೂರಪ್ಪನವರು ಪತ್ರಿಕೆಗಳ ಆಧಾರದ ಮೇಲೆ ಹೇಳುತ್ತಿದ್ದಾರೆ. It is a question of fact.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳನ್ನು ಕರೆಸಬೇಕು. ಸಂಬಂಧಪಟ್ಟವರನ್ನು ಕರೆಸಬೇಕು.

(ಗೊಂದಲ)

ಶ್ರೀ ಎನ್.ಜಿ. ನಾಯಕ್ : ಅವರು ಮಾತನಾಡಲು ಪ್ರಾರಂಭ ಮಾಡಿದರೆ ನಾವೂ ಸಹ ಮಾತನಾಡಲು ನಿಲ್ಲಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಯಡಿಯೂರಪ್ಪನವರು ಪತ್ರಿಕೆಗಳ ಆಧಾರದ ಮೇಲೆ ಭ್ರಷ್ಟಾಚಾರದ ಆಧಾರದ ಮೇಲೆಯೇ ಮಂತ್ರಿವಲಯದಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಮಾಡಲು ಸರ್ಕಾರಕ್ಕೆ ಹಕ್ಕಿಲ್ಲವೆನ್ನತಕ್ಕದ್ದನ್ನು ಹೇಳುತ್ತಿದ್ದಾರೆ.

It is a question of fact. The concerned Minister should say whether the Cabinet decision has been taken only on the basis of corruption.

Mr. Speaker : I think hon'ble member Koliwad has put it very succinctly and I must compliment you, Mr. Koliwad.

ಶ್ರೀ ಕೋಳಿವಾಡ್ : ರೀಸನಬಲ್ ಟೈ ಎಂದು ತಾವು ಹೇಳಿದಿರಿ, What is the reasonable time is a question. Which depends upon the circumstances in the particular case. ನೋಟೀಸನ್ನು 15 ನಿಮಿಷ ಮೊದಲು ಕೊಟ್ಟಿದೆ.

ಅಧ್ಯಕ್ಷರು : ಅದು ಬೇಡ ಬಿಡಿ. Now we will summon the Information Minister wherever he is. at him come and make his submission here. I will withhold it.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಮಂತ್ರಿಮಂಡಲದ ಸಭೆಯ ತೀರ್ಮಾನವನ್ನು ತೆಗೆದುಕೊಳ್ಳುವವರಲ್ಲಿ ಪ್ರಮುಖರಾದವರು ಎಂದರೆ ಮಾನ್ಯ ಮುಖ್ಯಮಂತ್ರಿಗಳು. ಅವರು ಇದು ಹೌದೋ, ಅಲ್ಲವೋ ಎಂದು.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಬೇಜವಾಬ್ದಾರಿ ವರ್ತನೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಪ್ರಮುಖವಾದ ವಿಷಯಗಳ ಬಗ್ಗೆ ಅವರು ಸ್ಟೇಟ್‌ಮೆಂಟ್ ಮಾಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ವಾರ್ತಾ ಸಚಿವರೇ ಹೇಳಿದ್ದಾರೆ. ಸಚಿವ ಸಂಪುಟದ ಮಾನ್ಯ ಸದಸ್ಯರು ಇಲ್ಲೇ ಕೂತಿದ್ದಾರೆ. ಇದು ಸಂಪುಟದ ಸಭೆಯಲ್ಲಿ ತೀರ್ಮಾನ ಆಯಿತೋ ಇಲ್ಲವೋ ಎಂದು ಅವರೇ ಹೇಳಲಿ. ಇದರಲ್ಲಿ ಗುಟ್ಟಾಗಿ ಇಡತಕ್ಕದ್ದು ಏನೂ ಇಲ್ಲ. ಸಚಿವ ಸಂಪುಟದ ಸಭೆಯಲ್ಲಿ ಇದು ತೀರ್ಮಾನವಾಗಿದೆ. ಎಂದು ಮಾನ್ಯ ವಾರ್ತಾ ಸಚಿವರೇ ಪತ್ರಿಕೆಗಳಿಗೆ ತಿಳಿಸಿದ್ದಾರೆ. ಅಂದಮೇಲೆ ಸಚಿವ ಸಂಪುಟದ ಸದಸ್ಯರು ಇಲ್ಲೇ ಇದ್ದಾರೆ.

ಅಲ್ಲಿ ಏನು ನಡೆಯಿತೆಂಬುದನ್ನು ಅವರು ಹೇಳಲಿ.

Mr. Speaker : I am trying to the Information Minister it is he who has briefed the press. ಅವತ್ತಿನ ಮಂತ್ರಿಮಂಡಲದಲ್ಲಿ ಏನು ನಡೆಯಿತು ಎಂಬುದನ್ನು.......

ಶ್ರೀ ವಾಟಾಳ್ ನಾಗರಾಜ್ : ಇವರು ಅವತ್ತಿನ ದಿವಸದ ಮಂತ್ರಿಮಂಡಲದ ಸಭೆಯಲ್ಲಿ ಇದ್ದರು.

(ಗೊಂದಲ)

ಅಧ್ಯಕ್ಷರು : ಈ ಬಗ್ಗೆ ಸರ್ಕಾರದವರು ಏನಾದರೂ ಹೇಳುವುದು ಇದೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಮುಂಚಿತವಾಗಿ ನಾನು ಒಂದು ವಿಚಾರವನ್ನು ಹೇಳಬೇಕಾಗಿದೆ. ಕಳೆದ ಅಧಿವೇಶನ ನಡೆದ ಸಂದರ್ಭದಲ್ಲಿ ಈ ಸರ್ಕಾರದವರು ನೇರವಾಗಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳ ನೇಮಕಾತಿಯನ್ನು ಮಾಡಿದರು. ಆ ಸಂದರ್ಭದಲ್ಲಿ ನಾನು ಈ ಸದನದಲ್ಲಿ ಒಂದು ಆಪಾದನೆಯನ್ನು ಮಾಡಿದೆ. ಈಗಿರತಕ್ಕ ಲೋಕಸೇವಾ ಸದಸ್ಯರ ಬಗ್ಗೆ ನಾನು ಈ ಸದನದಲ್ಲಿ ಒಂದು ಆಪಾದನೆಯನ್ನು ಮಾಡಿದೆ. ಈಗಿರತಕ್ಕ ಲೋಕಸೇವಾ ಸದಸ್ಯರ ಬಗ್ಗೆ ನಾನು ಏನು ಹೇಳಿದೆ ಎಂದರೆ ಬಹಳ ಕಡಿಮೆ ನಂಬರ್ ಇರತಕ್ಕವರಿಗೆ ಹೆಚ್ಚಿನ ನಂಬರನ್ನು ಕೊಟ್ಟು ಸೆಲೆಕ್ಷನ್ ಮಾಡುತ್ತಿದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಈ ನೇಮಕಾತಿಯಲ್ಲಿ ತೆಗೆದುಕೊಂಡಿದ್ದಾರೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ; ಕರ್ನಾಟಕ ಇಂಜಿನಿಯರ್ಸ್ ಅಸೋಸಿಯೇಷನ್‌ನವರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಒಂದು ಮನವಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಿದಾಗ ತಾವು ಈ ಸದನದಲ್ಲಿ ಈ ವಿಷಯುವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರಿ. ಬಹುಶಃ ಇದು ತಮಗೆ ಜ್ಞಾಪಕದಲ್ಲಿರಬಹುದು. ಇದು ಮೊದಲನೆಯದು.

ಈಗ ಎರಡನೆಯದಾಗಿ, ಹೈಸ್ಕೂಲ್ ಟೀಚರ್ಸ್ ರಿಕ್ರೂಟ್‌ಮೆಂಟ್ ಬಗ್ಗೆ ಆಪಾದನೆ ಬಂದಿದೆ ಎಂದು ತಾವು ಹೇಳುತ್ತಿದ್ದೀರಿ. ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳ ನೇಮಕಾತಿಯಲ್ಲಿ ನೇರವಾಗಿ ಹಣ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದ್ದರ ಬಗ್ಗೆ ತಾವು ವಿಚಾರಣೆಯನ್ನು ಮಾಡಲಿಲ್ಲ. ಮತ್ತು ಈ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಕರ್ನಾಟಕ ಸ್ಟೇಟ್ ಇಂಜಿನಿಯರ್‌ಗಳ ಅಸೋಸಿಯೇಷನ್‌ನವರು ನನ್ನನ್ನು ಭೇಟಿ ಮಾಡಿ ಏನು ಹೇಳಿದರೆಂದರೆ, ನಿಮ್ಮ ಸರ್ಕಾರದವರು ರಿಕ್ರೂಟ್‌ಮೆಂಟ್ ಆರ್ಡರನ್ನು, ಅಂದರೆ ಅಪಾಯಿಂಟ್‌ಮೆಂಟ್ ಆರ್ಡರನು ಕೊಡತಕ್ಕ ಕರಾಕುಗಿಯಲ್ಲಿ

ಇದ್ದಾರೆ. ಅದನ್ನು ನೀವು ಏನಾದರೂ ಮಾಡಿ ನಿಲ್ಲಿಸಬೇಕು ಎನ್ನತಕ್ಕ ಮಾತನ್ನು ಅವರು ನನಗೆ ಹೇಳಿದ್ದಾರೆ. ಅದರ ಬಗ್ಗೆ ಇದುವರೆಗೂ ಯಾವುದೇ ವಿಚಾರಣೆ ಕೂಡ ಆಗಿಲ್ಲ. ಪತ್ರಿಕೆಗಳಲ್ಲಿ ಬಂತು ಅಥವಾ ಯಾರೋ ಮಾತನಾಡಿಕೊಂಡರೆಂದು ಈಗ ನೀವು ಈ ಕ್ರಮ ತೆಗೆದುಕೊಂಡಿದ್ದೀರಿ. ಈಗಾಗಲೇ ಸುಮಾರು 2 ಸಾವಿರ ಜನರನ್ನು ನೀವು ನೇಮಕಾತಿ ಮಾಡಿಕೊಂಡಿದ್ದೀರಿ. ಲೋಕಸೇವಾ ಆಯೋಗದವರು ಎಲ್ಲಾ ಕಡೆಗೂ ಹೋಗಿ ಇಂಟರ್‌ವ್ಯೂ ಮಾಡಿರುವಾಗ ನೀವು ಯಾವ ಆಧಾರದ ಮೇಲೆ ಮಾಡಿದಿರಿ? ಎನ್‌ಕ್ವೈರಿ ಮಾಡಿದಿರಾ? ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿರಬಹುದು. ಮಾನ್ಯ ರಂಗನಾಥ್‌ರವರು ಹೇಳಿದಂತೆ ಕ್ಯಾಬಿನೆಟ್ ತೀರ್ಮಾನಗಳನ್ನು ಇಲ್ಲಿ ಡಿಸ್ಕಸ್ ಮಾಡತಕ್ಕದ್ದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಆದರೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾದ ಕೂಡಲೇ ಅದನ್ನು ನಿಲ್ಲಿಸಬೇಕೆಂದು ಏನಿದೆ? ನಿಮಗೆ ಏನು ಆಪಾದನೆ ಬಂದಿದೆ ಎಂಬ ಬಗ್ಗೆ ಇಲ್ಲಿ ದೀರ್ಘವಾಗಿ ಚರ್ಚೆಯಾಗಬೇಕು. ಇವತ್ತಿನ ಲೋಕಸೇವಾ ಆಯೋಗದ ಬಗ್ಗೆ ಕೂಲಂಕುಷವಾದ ಚರ್ಚೆ ಆಗಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಚರ್ಚೆಯ ಬಗ್ಗೆ ನಾನು ಏನೂ ಹೇಳಿಲ್ಲ. ಆಪಾದನೆ ಬಂತು ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿ ಅದು ಪತ್ರಿಕೆಗಳಲ್ಲಿ ಬಂದಿದ್ದರಿಂದ ಅದರ ಸತ್ಯಾಂಶ ಏನೆಂಬುದನ್ನು ತಿಳಿದುಕೊಳ್ಳಬೇಕೆಂದು ನಾನು ಹೇಳಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಎಲ್ಲಿದೆ ಸ್ವಾಮಿ? ಸರ್ಕಾರ ಸತ್ತಿದೆ. ಇಲ್ಲಿ ಜವಾಬ್ದಾರಿ ಸರ್ಕಾರ ಇಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ : ನಾನು ಹೇಳುವುದಕ್ಕೆ ಅವಕಾಶವೇ ಇಲ್ಲವೇ? ನಾನು ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಕೇಳಿ ಮಾತನಾಡುತ್ತೇನೆ. ಅವರು ನನಗೆ ಅವಕಾಶವನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ನಾನು ಮಾತನಾಡುವುದಕ್ಕೆ ಅನುಮತಿ ಕೇಳಿದ್ದಕ್ಕೆ ಅವರು ಕೊಟ್ಟಿದ್ದಾರೆ. ಆದುದರಿಂದಲೇ ನಾನು ಹೇಳಿದ್ದು. ವಿಚಾರ ಏನೆಂಬುದನ್ನು ಹೇಳಿ ಎಂದು ತಾವು ಹೇಳಿದಿರಿ. ಮಾನ್ಯ ಮಂತ್ರಿಗಳು ಕ್ಯಾಬಿನೆಟ್ ಸದಸ್ಯರಾಗಿದ್ದಾರೆ. ಅದಕ್ಕಾಗಿಯೇ ವಾಪಸ್ಸು ತೆಗೆದುಕೊಂಡರೋ ಅಥವಾ ಬೇರೆ ಇನ್ನೇನಾದರೂ ಉದ್ದೇಶ ಇದೆಯೋ ಎಂಬುದನ್ನು ಅವರಿಗೆ ಗೊತ್ತಿದ್ದು ಹೇಳಿದರೆ ಅನಂತರ ನಾವು ಮುಂದಕ್ಕೆ ಹೋಗುವುದಕ್ಕೆ ಬಹಳ ಸುಲಭವಾಗುತ್ತದೆ. ಇಲ್ಲದಿದ್ದರೆ ಅಂದರೆ ಅವರು ಹೇಳದಿದ್ದರೆ ಈ ಹೇಳಿಕೆಯನ್ನು ಕೊಟ್ಟಂಥ ವಾರ್ತಾ ಮಂತ್ರಿಗಳೇ ಬಂದು ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅದುವರೆಗೂ ಇದನ್ನು ತಾವು ನಿಲ್ಲಿಸಿ ಅನಂತರ ತೆಗೆದುಕೊಳ್ಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಇವತ್ತು ಪಬ್ಲಿಕ್ ಸರ್ವೀಸ್ ಕಮೀಷನ್‌ನ ಬಗ್ಗೆ ಮಾಡಲಿಕ್ಕೆ ಯಾವುದೇ ರೀತಿಯ ಕಾನೂನಿನ ಅಡಚಣೆ ಇಲ್ಲ. ನಾವು ಚರ್ಚೆ ಮಾಡೋಣ. ಮುಖ್ಯಮಂತ್ರಿಗಳಾಗಲಿ, ಮಂತ್ರಿಗಳಾಗಲಿ ಸಂಬಂಧಪಟ್ಟ ಸಚಿವರು ಇದರ ಬಗ್ಗೆ ದೀರ್ಘವಾದ ಹೇಳಿಕೆಯನ್ನು ಇವತ್ತು ಕೊಡಲಿ. ನಾವು ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಈಗತಾನೆ ತಾವು ಹೇಳಿದಿರಿ ವಾರ್ತಾ ಮಂತ್ರಿಗಳಿಗೆ ಹೇಳಿ ಕಳುಹಿಸೋಣ, "We will summon him. Let him come. Than we will take"ಎಂದು.

ಅಧ್ಯಕ್ಷರು : ನಾನು ಹೇಳಿದ್ದೇನೆ. ಹೇಳಿದ್ದನ್ನೇ ಪುನಃ ಹೇಳುತ್ತಿದ್ದರೆ ಅದಕ್ಕೆ ಕಿಮ್ಮತ್ತು ಜಾಸ್ತಿಯಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಾನೂನು ಸಚಿವರು ಇಲ್ಲಿಯೇ ಇದ್ದಾರೆ....

(ಗೊಂದಲ)

ಅಧ್ಯಕ್ಷರು : ನಾನು ಹೇಳುವುದನ್ನು ಸ್ವಲ್ಪ ಕೇಳುತ್ತೀರಾ? ಕಾನೂನು ಸಚಿವರು ಬಾಯಿ ಬಿಡುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಚಿವ ಸಂಪುಟದಲ್ಲಿ ಏನು ನಡೆಯಿತೆನ್ನುವುದನ್ನು ಮಾನ್ಯ ವಾರ್ತಾ ಸಚಿವರು ಹೊರಗಡೆ ಹೇಳಿರತಕ್ಕಂಥಾದ್ದು. ಸಂಪುಟದ ಸದಸ್ಯರಾದಂತಹ ನ್ಯಾಯಾಂಗ ಸಚಿವರು ಇದ್ದಾರೆ, ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು : ಈಗ ಕಾನೂನು ಸಚಿವರು ಸದನಕ್ಕೆ ಬಂದುದೇ ತಪ್ಪೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವತ್ತಿನ ಸಭೆಯಲ್ಲಿ ಇವರೂ ಭಾಗವಹಿಸಿದ್ದರೇ ಇಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಂಜುನಾಥ್‌ರವರು ಯಾವಾಗಲೂ ಕೂಗುತ್ತಿರುತ್ತಾರೆ. ಈಗ ಏಕೆ ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರಿಗೆ ಸಮಾಧಾನವಿಲ್ಲವೆಂದು ಕಾಣುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ಹೇಳಿಕೆ ಕೊಡುವುದರಲ್ಲಿ ಸಂಬಂಧಪಟ್ಟ ಮಂತ್ರಿಗಳನ್ನು ಇಲ್ಲವೇ ಮುಖ್ಯಮಂತ್ರಿಗಳನ್ನು ಕರೆಸಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರು ತಮ್ಮ ಸೀಟಿನಿಂದ ಹೊರಗೆ ಬಂದು ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಎಂದು ಕೂಗುತ್ತಿದ್ದರು)

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ಬಂದು ಉತ್ತರ ಕೊಡುವುದಕ್ಕಾಗುವುದಿಲ್ಲವೇ?

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ : ಒಂದೇ ಒಂದು ಪಾಯಿಂಟ್ ಅನ್ನು ಪ್ರೊ. ನಂಜುಂಡಸ್ವಾಮಿಯವರು ಎಲ್ಲಿ ನಿಲ್ಲಿಸಿದ್ದರೋ ಅಲ್ಲಿಂದ ಮುಂದುವರೆಸಿ ಕನ್‌ಕ್ಲೂಡ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಈ ಸದನದಲ್ಲಿ ಅವರವರ ಸ್ಥಾನಗಳಿಂದ ಗಂಭೀರವಾಗಿ ಅವರ ಅಭಿಮತವನ್ನು ಅನಿಸಿಕೆಗಳನ್ನು ಹೇಳಿಕೊಳ್ಳುವಂತಹ ಸ್ವಾತಂತ್ರ್ಯಕ್ಕೆ ನಾನು ರಕ್ಷಣೆ ಮಾಡಿಕೊಡುತ್ತೇನೆ. ಆದರೆ ಅಡ್ಡಾಡಿಕೊಂಡು ಹೇಳತಕ್ಕಂತಹ ಸ್ವಾತಂತ್ರ್ಯ ಯಾರಿಗೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಒಬ್ಬ ಜವಾಬ್ದಾರಿಯಿರುವ ಮಂತ್ರಿಗಳು ಇಲ್ಲ. ಸರಕಾರದ ಗಮನ ಸೆಳೆಯಬೇಕಾದರೆ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಅನಿವಾರ್ಯವಾಗಿ ಕೆಲಸ ಮಾಡಬೇಕಾಗುತ್ತದೆ. ತಮ್ಮ ಸ್ಥಾನಕ್ಕೆ ಅವಮಾನ ಮಾಡಬೇಕೆಂದಲ್ಲ.

ಅಧ್ಯಕ್ಷರು : ನಾನು ಅದನ್ನು ಹೇಳಲಿಲ್ಲ. ನಾನು ಹೇಳಿದಂಥಾದ್ದು ಒಂದು ಸೀಮಿತವಾದಂತಹ ಕಾನ್‌ಸೆಪ್ಟ್ ಯಾವ ಒಂದು ಸ್ಥಾನವನ್ನು ನಾನು ತಮಗೆ ನಿಯೋಜಿಸಿಕೊಟ್ಟಿದ್ದೇವೆ, ಆ ಸ್ಥಾನದಲ್ಲಿ ತಾವು ನಿಂತು ಹೇಳಿದರೆ ಅದಕ್ಕೆ ಹೆಚ್ಚು ಕಿಮ್ಮತ್ತು ಬರುತ್ತದೆ. ಅಲ್ಲಿಂದ ಬಂದು ಇಲ್ಲಿ ಹೇಳಿದಿರಿ ಪುನಃ ಇಲ್ಲಿಂದ ಅಲ್ಲಿಗೆ ಹೋದಿರಿ. ಅದಕ್ಕೇ ನಾನು ಹೇಳಿದ್ದು There is a place of an Hon. Member, not a floating Member.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಚೌಕಟ್ಟಿನಲ್ಲಿ ಕೆಲಸ ಮಾಡಿದಾಗ ಆ ಗೌರವ ಇಲ್ಲವಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಸಭೆಯಲ್ಲಿ ಮುಖ್ಯಮಂತ್ರಿಗಳು ಇಲ್ಲ ಮಾನ್ಯ ಶಿವಮೂರ್ತಿಯವರಿಗೆ ಹೇಳಿಕಳಿಸಿದಿರಿ, ಆದರೂ ಬರಲಿಲ್ಲ.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ, ಸಮಾಧಾನ ತಂದುಕೊಳ್ಳಿ. ವಿಚಾರಗಳೆಲ್ಲಾ ಕಂಪ್ಯೂಟರ್ ವೇಗದಲ್ಲಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಹೇಳುವವರು ಕೇಳುವವರು ಇಲ್ಲ.

ಅಧ್ಯಕ್ಷರು : ನಾನು ಕಂಪ್ಯೂಟರ್ ಎಂದು ಕರೆದರೆ ತಾವು ಮತ್ತೆ ಶುರುಮಾಡಬೇಡಿ; ಕೋಟ್ಯಾಂತರ ರೂಪಾಯಿ ಎಂದು ಹೇಳಿ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಲೋಕಸೇವಾ ಆಯೋಗ ಮಾಡಿದಂಥ ಕೆಲಸದಲ್ಲಿ ಈ ಸರ್ಕಾರ ಹಸ್ತಕ್ಷೇಪ ಮಾಡಿದೆ ಎನ್ನುವ ವಿಷಯದಲ್ಲಿ ಚರ್ಚೆ ನಡೆಯುತ್ತಿದೆ. ಇಂಥ ಒಂದು ಸಂದರ್ಭದಲ್ಲಿ.....

(ಗೊಂದಲ)

ತಿದ್ದಿಕೊಳ್ಳುತ್ತೇನೆ; ಚರ್ಚೆ ಮಾಡಬೇಕೆ ಬೇಡವೇ ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. ಸಂತೋಷ ತಾನೇ. ಈ ಪ್ರಶ್ನೆ ಇಷ್ಟೇನೆ. ಇಂಥ ಒಂದು ಸಂದರ್ಭ ಬರಬಹುದೇನೋ ಎಂದು ಮಾನ್ಯ ನಂಜುಂಡಸ್ವಾಮಿಯವರು ಹೇಳಿದಂತೆ ಇಂತಹ ಇನ್‌ಸ್ಟಿಟ್ಯೂಷನ್‌ಗಳಿಗೆ ಕಾನ್‌ಸ್ಟಿಟ್ಯೂಷನ್ ಸೇಫ್‌ಗಾರ್ಡ್ ಕೊಟ್ಟಿದ್ದಾರೆ. ಕಾನ್‌ಸ್ಟಿಟ್ಯೂಷನ್‌ನನ್ನು ನಾವು ಇಲ್ಲಿ ಎಲ್ಲೋ ಸುಮ್ಮನೆ ಪರೀಕ್ಷೆಗೆ ಓದಿಕೊಂಡವರು. ಕಾನ್‌ಸ್ಟಿಟ್ಯೂಷನ್‌ನ್ನು ತಾವು ಟೆಕ್ಸ್ಟ್‌ನಲ್ಲಿ ಓದಿಬಂದಿರುವವರು. ಆದ್ದರಿಂದ ನಾನು ಹೆಚ್ಚು ಶ್ರಮವನ್ನು ತೆಗೆದುಕೊಳ್ಳುವುದಿಲ್ಲ. ಈ ದೇಶದಲ್ಲಿ ರಾಜಕೀಯ ಮಾಡುವಂಥವರು, ಅಧಿಕಾರ ಮಾಡುವಂಥವರು ಆಡಳಿತ ಮಾಡುವಂಥವರು ಕೆಲವು ಸ್ವತಂತ್ರ ಸಂಸ್ಥೆಗಳ ಮೇಲೆ ಇಂಟರ್‌ಫಿಯರೆನ್ಸ್ ಮಾಡಬಹುದು ಎನ್ನುವ ಉದ್ದೇಶ ಇಟ್ಟುಕೊಂಡೇ ನಮ್ಮ ಕಾನ್‌ಸ್ಟಿಟ್ಯೂಷನ್ ಫಾದರ್ಸ್ ಅಥವಾ writers have inserted the safeguards. ಇವತ್ತು ಇದು ಅತ್ಯಂತ ಗಂಭೀರವಾದ ಪ್ರಶ್ನೆ. ತಾಂತ್ರಿಕ ವಿಷಯಗಳನ್ನು ಬದಿಗೊತ್ತಿ ತಾವು ಇದರಲ್ಲಿ ಕಾರ್ಯವಿಮುಕ್ತರಾಗಬೇಕೆಂದು ನನ್ನ ಪ್ರಾರ್ಥನೆ. ಈ ರೂಲ್ಸ್‌ನ ಕೊನೆಯ ಭಾಗವನ್ನು ತಾವು ದಯವಿಟ್ಟು ಪರಾಂಭರಿಸಬೇಕು. "Provided that the Speaker may in his discretion.." I emphasize the words "in his or her discretion", "...allow such matters being raised in the House as concerned with the procedure." So, regarding th procedure, if there is any lapse or shortacoming, I request the Chair, the Hon'ble Speaker, to use his discretion, because the matter is so important . ಒಂದು ಗಂಭೀರವಾದ ವಿಷಯಕ್ಕೆ ತಾಂತ್ರಿಕ ನೆಪವನ್ನು ಒಡ್ಡಿ ಸಾರ್ವಜನಿಕ ವೇದಿಕೆಯಲ್ಲಿ ಚರ್ಚೆಗೆ ಬರದಂತೆ ಮಾಡುವಂಥದ್ದು ಒಂದು ಉತ್ತಮವಾದ ಸಂಪ್ರದಾಯವಾಗಲಾರದು. ಆದ್ದರಿಂದ ಸ್ಪೀಕರ್‌ರವರಿಗೆ in respect of procedure discretion is there ಆದ್ದರಿಂದ ಅವಕಾಶ ಮಾಡಿಕೊಡಬೇಕು. ಮತ್ತೆ ನಾನು ಇಲ್ಲಿ ಸ್ವಲ್ಪ ದಿವಸ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಎಲ್ಲಾ ವಿಷಯಗಳನ್ನು ತನ್ನ ಕೈಯಲ್ಲಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಡಿಸೌಜರವರಾಗಲಿ, ಮಾನ್ಯ ರಂಗನಾಥ್‌ರವರಾಗಲಿ ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ನಾನು ಕೂಡ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಮಂತ್ರಿಯವರು ಒಂದು ಗಂಟೆ ಕಾಲಾವಕಾಶ ಬೇಕೆಂದು ಹೇಳಿದ್ದಾರೆ. ತಮ್ಮಲ್ಲಿ ನಾನು ನಿವೇದನೆ ಮಾಡಿಕೊಳ್ಳುತ್ತೇನೆ. ಏನೆಂದರೆ ಅವರಿಗೆ ಒಂದು ಗಂಟೆ ಕಾಲಾವಕಾಶವನ್ನು ಕೊಟ್ಟು ನಂತರ ಈ ವಿಷಯವನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ಗಂಟೆ ಅವರಿಗೆ ಅವಕಾಶವನ್ನು ಕೊಟ್ಟು ದಯವಿಟ್ಟು ತಾವು ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಾವು ಇದರ ಬಗ್ಗೆ ಪ್ರಿಲಿಮನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದರ ಮೇಲೆ ಇನ್ನೂ ಅನೇಕ ವಿವರಗಳನ್ನು ಕೊಡಬೇಕಾಗಿದೆ. ಸಂಬಂಧಪಟ್ಟ ವಾರ್ತಾ ಸಚಿವರು ಇದುವರೆಗೆ ಬರಲಿಲ್ಲ. ಪ್ರಮುಖವಾದ ಯಾವುದೇ ಖಾತೆಯ ಸಚಿವರೂ ಇಲ್ಲ. ಸರ್ಕಾರದಿಂದ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇವೆಂದು ತಾವು ಕೂಡ ಹೇಳಿಲ್ಲ. ನಾನು ನನ್ನ ಮನಸ್ಸಿನ ಸಮಾಧಾನಕ್ಕೆ ಈ ಸರ್ಕಾರಕ್ಕೆ ಸಂಬಂಧಪಟ್ಟ ಮುಖ್ಯಮಂತ್ರಿಗಳು ಅಥವಾ ಪ್ರವಾಸೋದ್ಯಮ ಸಚಿವರು ಬಂದು ಹೇಳಿಕೆ ಕೊಡುವವರೆಗೆ ಕಾಯುತ್ತೇವೆ. ತಾವು ಈಗಾಗಲೇ ಅವರು ಹೇಳಿಕೆಯನ್ನು ಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು : ಅವರಿಂದ ತಿಳಿಯೋಣ. ಏತಕ್ಕೆಂದರೆ ನೀವು ಯಾವ ಆಧಾರದ ಮೇಲೆ ಈ ಪ್ರಶ್ನೆಯನ್ನು ಸದನಕ್ಕೆ ತಂದಿದ್ದೀರಿ ಆ ಆಧಾರದ ಮೇಲೆ ಸಮಾಧಾನ ಮಾಡಿಕೊಳ್ಳಬೇಕಲ್ಲಾ. ಆದ್ದರಿಂದ ಅವರಿಗೆ ಹೇಳಿಕಳುಹಿಸಿದ್ದೇನೆ. ಅವರು ಬಂದಮೇಲೆ ಈ ವಿಚಾರವನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಸಚಿವರು ಕ್ಯಾಬಿನೆಟ್ ಸಚಿವರಾಗಿ ಇದ್ದಾರೆ. ಆದ್ದರಿಂದ ಅವತ್ತು ಮಂತ್ರಿಮಂಡಲದ ಸಭೆಯಲ್ಲಿ ಆ ತೀರ್ಮಾನವನ್ನು ತೆಗೆದುಕೊಂಡಿತ್ತೋ ಇಲ್ಲವೋ ಎನ್ನುವ ಮಾತನ್ನು ಅವರು ಹೇಳಲಿ. ಇಲ್ಲದಿದ್ದರೆ ಪತ್ರಿಕೆಗಳ ಗೌರವಕ್ಕೆ ಹಲ್ಲೆ ಮಾಡಿದಂತಾಗುತ್ತದೆ. ಜವಾಬ್ದಾರಿಯುತ ಪತ್ರಿಕೆಗಳವರು ಬರೆದಿರುತ್ತಾರೆ. ಅದಕ್ಕೋಸ್ಕರ ಸರ್ಕಾರದಿಂದ ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಿಸಬೇಕು, ಸ್ವಾಮಿ. ಪತ್ರಿಕೆಯಲ್ಲಿ ಬಂದಿರುವುದನ್ನು ಅಲೋ ಮಾಡಿದರೆ ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ. ಆಗುವುದಿಲ್ಲವೆಂದರೆ ನಾನು ವಿವರಕ್ಕೆ ಹೋಗುವುದಿಲ್ಲ. ಪ್ರಿಲಿಮನರಿ ಸಬ್‌ಮಿಷನ್‌ಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಸರ್ಕಾರ ಈ ರೀತಿ ಲೋಕಾಯುಕ್ತ ಆಯೋಗದಿಂದ ಈ ಮುಖ್ಯ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ವಿತ್‌ಡ್ರಾ ಮಾಡಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು. ಮಾನ್ಯ ಶಿವಮೂರ್ತಿಯವರು ಪತ್ರಿಕಾ ಹೇಳಿಕೆ ಕೊಟ್ಟಿರುವುದು ಹೌದೋ ಅಲ್ಲವೋ? ಕ್ಯಾಬಿನೆಟ್‌ನಲ್ಲಿ ಇದು ತೀರ್ಮಾನ ಆಗಿದೆಯೋ ಇಲ್ಲವೋ; ಅದಷ್ಟನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಹಕ್ಕು ಇದೆಯೋ ಇಲ್ಲವೋ ಸ್ವಾಮಿ, ಅದಕ್ಕೆ ದಯವಿಟ್ಟು ತಾವು ಸರ್ಕಾರದಿಂದ ಉತ್ತರವನ್ನು ಕೊಡಿಸಬೇಕು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ತಾವು ಈಗಾಗಲೇ ಅಪ್ಪಣೆ ಕೊಟ್ಟಿದ್ದೀರಿ. "We will summon the Information Minister" ಎಂದು. ತಾವು ಬಹಳ ತೀವ್ರವಾದ ಶಬ್ದವನ್ನು ಉಪಯೋಗಿಸಿದ್ದೀರಿ. Mr. Speaker : ~~I will stand~~ corrected. We will request the Hon'ble Minister for Information to come to the House and mak his clarification. Perhaps inadvertantly I used the word ' Summon'. With due deference to Shri. Ananthakrishna's submission, it may be amended to say, " Information Minister may kindly be requested to be present in the House to make his clarification."

ಶ್ರೀ ವಾಟಾಳ್ ನಾಗರಾಜ್ : ಇವತ್ತು ಸಾಯಂಕಾಲದ ಒಳಗೆ ಸ್ಟೇಟ್‌ಮೆಂಟ್ ಮಾಡಲಿಕ್ಕೆ ಆಗುವುದಿಲ್ಲವೇ ಸ್ವಾಮಿ? ಅವರನ್ನು ತಾವು ಯಾವ ಗಳಿಗೆಯಲ್ಲಾದರೂ ಕರೆಯಬಹುದು. ಅವರಿಗೆ ಪ್ರಾರ್ಥನೆ ಸಲ್ಲಿಸಬೇಕೆನ್ನುವ ಅವಶ್ಯಕತೆ ಇಲ್ಲ. ಅದುದರಿಂದ ಈ ಒಂದು ತಿದ್ದುಪಡಿ ಮಾಡಬೇಕಾದ ಅಗತ್ಯವಿಲ್ಲ. ಯಾವ ಘಳಿಗೆಯಲ್ಲಿ ಯಾರನ್ನು ಬೇಕಾದರು ಕರೆಯತಕ್ಕಂಥ ಅಧಿಕಾರ ತಮಗೆ ಇದೆ. ತಾವು ಪ್ರಾರ್ಥನೆ ಮಾಡುವ ಭಾವನೆ ಬೇಡ.

ಅಧ್ಯಕ್ಷರು : ಆ ಹಕ್ಕನ್ನು ನಾನು ಎಂದೂ ಚಲಾಯಿಸಿಲ್ಲ. ಯಾವ ಘಳಿಗೆಯಲ್ಲಿ ಯಾವ ಮೆಂಬರನ್ನಾಗಲಿ, ಯಾವ ಮಿನಿಸ್ಟರನ್ನಾಗಲಿ ಬರಲಿ ಎಂದು ಕರೆಯುವಷ್ಟು ಆತುರ ಬೇಡ.

ಶ್ರೀ ವಾಟಾಳ್ ನಾಗರಾಜ್ : ಈ ಸದನದ ಸಭೆಯು ನಡೆಯುವಾಗ ಯಾವ ಸಚಿವರನ್ನಾದರೂ ಸದನಕ್ಕೆ ಕರೆಯಲಿಕ್ಕೆ ತಮಗೆ ಅಧಿಕಾರವಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತಕ್ಕಂಥದ್ದೇನೆಂದರೆ ಸಭೆ ನಡೆಯುತ್ತಿರುವ ಕಾಲದಲ್ಲಿ ಮಂತ್ರಿಗಳಾಗಿರತಕ್ಕಂಥವರು ಈ ಜವಾಬ್ದಾರಿ ಸದನದಲ್ಲಿರಬೇಕಾದ್ದು ಅವರ ಕರ್ತವ್ಯವಾಗಿರುತ್ತದೆ. ಆ ಕರ್ತವ್ಯವನ್ನು ಅವರು ನಿರ್ವಹಿಸುತ್ತಿಲ್ಲ. ತಾವು ಅವರಿಗೆ ವೀಳ್ಯ ಕೊಟ್ಟು ಕರೆಯಬೇಕಾದ ಅವಶ್ಯಕತೆ ಇಲ್ಲ. ಸಾಧಾರಣವಾಗಿ ಒಂದು ಗುರುತರವಾದ ವಿಷಯ ಚರ್ಚೆಯಾಗುತ್ತಿದ್ದರೂ ಸಹಿತ ಅವರು ಈ ಸದನದಲ್ಲಿಲ್ಲ.

ಅಧ್ಯಕ್ಷರು : ಅವರಿಗೇನು ಗೊತ್ತು, ಗುರುತರವಾದ ಚರ್ಚೆ ನಡೆಯುತ್ತಿದೆ ಎಂದು. ಆದ್ದರಿಂದ ಅವರಿಗೆ ಹೇಳಿ ಕಳುಹಿಸೋಣ, ಬರುತ್ತಾರೆ.

ಶ್ರೀ ಸಿ. ಬೈರೇಗೌಡ : ಮಂತ್ರಿಮಂಡಲಕ್ಕೆ ಜವಾಬ್ದಾರಿ ಇಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಈ ಸೂಚನೆಯನ್ನು ನಾಳೆ ತೆಗೆದುಕೊಳ್ಳಬಹುದೆಂದು ಮಾನ್ಯ ಕಾನೂನು ಸಚಿವರು ಮನವಿ ಮಾಡಿದ್ದಾರೆ.

ಶ್ರೀ ಬ್ಲೇಸಿಯಸ್ ಡಿಸೋಜ : ನಾನು ಆ ರೀತಿ ಸೂಚನೆ ಮಾಡಿಲ್ಲ.

Mr. Speaker : I will come to your rescue Mr. D'souza. In Parliamentary ಪಾರ್ಲರ್‌ನಲ್ಲಿ ನಾಳೆ ಅಂದರೆ, ನಾಳೆ ಸದನ ಇಲ್ಲದಿದ್ದರೆ ಪುನಃ ಯಾವಾಗ ಸೇರುತ್ತದೆ ಆಗ ಎಂದು ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸದ್ಯಕ್ಕೆ ಮತ್ತೆ ಈ ಸದನ ಸೇರತಕ್ಕ ಸೂಚನೆ ಕಾಣುತ್ತಿಲ್ಲ. ಅಂದಾಗ ಈ ವಿಷಯವನ್ನು ಮುಂದಿನ ವರ್ಷ ತೆಗೆದುಕೊಳ್ಳಲಾಗುವುದೆಂದು ನಾವು ಭಾವಿಸಿಕೊಳ್ಳಬೇಕೆಂದು ನನಗೆ ಅನ್ನಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ ನಾನು ಕಳೆದ 6 ವರ್ಷಗಳಿಂದ ಈ ಸದನದಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ರೀತಿ ಗುರುತರವಾದ ದೊಡ್ಡ ವಿಷಯ ಚರ್ಚೆ ಆದಾಗ ಒಂದು ಸಾಲು ಸಹ ಉತ್ತರ ಕೊಡದಂಥ ಘಟನೆ ಹಿಂದೆ ನಡೆದಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನತೆಗೆ ನ್ಯಾಯ ಒದಗಿಸಿಕೊಡತಕ್ಕ ಸಂದರ್ಭದಲ್ಲಿ, ವಿರೋಧ ಪಕ್ಷದಲ್ಲಿ ಕರ್ತವ್ಯ ನಿರ್ವಹಿಸತಕ್ಕ ಸಂದರ್ಭದಲ್ಲಿ, ಸರ್ಕಾರ ಅಕ್ಷಮ್ಯ ಅಪರಾಧ ಮಾಡಿ, ಸಂವಿಧಾನಬಾಹಿರವಾಗಿ ನಡೆದುಕೊಂಡಿರತಕ್ಕ ಸಂದರ್ಭದಲ್ಲಿ ಒಂದು ಸಾಲು ಉತ್ತರ ಕೊಡುವುದಿಲ್ಲವೆಂದರೆ ಹೇಗೆ? ಕ್ಯಾಬಿನೆಟ್‌ನ ಹಿರಿಯ ಸಚಿವರು ಒಂದು ಮಾತನ್ನು ಹೇಳುವುದಕ್ಕೆ ಸಿದ್ಧವಿಲ್ಲವೆಂದರೆ ನಾವು ಏನೆಂದು ಭಾವಿಸಬೇಕು? ಮಾನ್ಯ ಪ್ರವಾಸೋದ್ಯಮ ಸಚಿವರು ಇದು ಸುಳ್ಳು ಎಂದು ಹೇಳಿದರು ಏಕೆಂದರೆ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಎಂಬ ಭಯ ಅವರಿಗೆ ಇದೆ. ಆದುದರಿಂದ, ದಯವಿಟ್ಟು ತಾವು ಮುಖ್ಯಮಂತ್ರಿಗಳನ್ನೇ ಕರೆಸಿ ಉತ್ತರ ಕೊಡಿಸುವ ವ್ಯವಸ್ಥೆ ಮಾಡಬೇಕು, ಮತ್ತು ನಮ್ಮ ರಕ್ಷಣೆಗೆ ಬರಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು : ನಾನು ವಾರ್ತಾ ಸಚಿವರಿಗಾಗಿ ಕಾಯುತ್ತಿದ್ದೇನೆ. ಅವರು ಬಂದಮೇಲೆ ಈ ಪ್ರಶ್ನೆಯನ್ನು ಮತ್ತೆ ಎತ್ತಿ.

Reg : Death in the Police custody in Gulbarga.

Sri Quamarul Islam : Sir, there is a death in police custody in Gulbarga and the situtation has become tense. Decision was taken by almost all the Opposition Parties to ask for the Hon. Home Minister's resignation because of the death in the police custody. The charge is that one B.S. Patil, a Congress worker has taken Rs. 25,000 from one Kamalakar Patil promising him a job then the work was not done. Kamalakar was demanding money back from B.S. Patil.

Mr. Speaker : You have not giving it in writing.

Sri Quamarul Islam : There was no reasonable time available for me to give the notice. I therefore feel that the Hon. Speaker may kindly use his discretionary power and permit me to raise this issue because this is a matter concerning....

Mr. Speaker : The Home Minister is not here.

Sri Quamarul Islam : I want to ask a clarification.

Mr. Speaker : Let the Home Minister come.

Sri Quamarul Islam : When he comes, kindly give me some time to speak.